Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

**( EXTRAORDINARY )**
**( ವಿಶೇಷ ಸಂಚಿಕೆ )**

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. १ | नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 | New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ | ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |


**Ministry of Law and Justice**
Legislative Department
New Delhi, 04th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012

## (2012ರ ಅಧಿನಿಯಮ ಸಂ. 32)

[19ನೇ ಜೂನ್ 2012]

ಲೈಂಗಿಕ ಅತ್ಯಾಚಾರದ, ಲೈಂಗಿಕ ಕಿರುಕುಳದ ಮತ್ತು ಕಾಮ ಪ್ರಚೋದಕ ಅಪರಾಧಗಳಿಂದ ಮಕ್ಕಳನ್ನು ಸಂರಕ್ಷಿಸಲು ಮತ್ತು ಅಂಥ ಅಪರಾಧಗಳ ಅಧಿವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

ಸಂವಿಧಾನದ 15ನೇ ಅನುಚ್ಛೇದದ (3)ನೇ ಖಂಡವು, ಇತರೆ ವಿಷಯಗಳ ಜೊತೆಗೆ, ಮಕ್ಕಳಿಗಾಗಿ ವಿಶೇಷ ಉಪಬಂಧಗಳನ್ನು ಕಲ್ಪಿಸಲು ರಾಜ್ಯಕ್ಕೆ ಅಧಿಕಾರ ನೀಡಿರುವುದರಿಂದ;

ಮಗುವಿನ ಹಿತಾಸಕ್ತಿಗಳನ್ನು ಅತ್ಯುತ್ತಮವಾಗಿ ಕಾಪಾಡುವಲ್ಲಿ ಎಲ್ಲಾ ಪಕ್ಷಕಾರ ರಾಷ್ಟ್ರಗಳು ಅನುಸರಿಸಬೇಕಾದ ವಿಧಿವಿಧಾನಗಳನ್ನು ಗೊತ್ತುಪಡಿಸಿರುವ, ವಿಶ್ವಸಂಸ್ಥೆಯ ಮಹಾಸಭೆಯು ಅಂಗೀಕರಿಸಿರುವ, ಮಗುವಿನ ಹಕ್ಕುಗಳ ಕುರಿತ ಒಡಂಬಡಿಕೆಗೆ ಭಾರತ ಸರ್ಕಾರವು, 11ನೇ ಡಿಸೆಂಬರ್, 1992ರಂದು ಒಪ್ಪಿಗೆ ನೀಡಿರುವುದರಿಂದ;

ಮಗುವಿನ ಸಮರ್ಪಕ ಬೆಳವಣಿಗೆಗೆ, ಆ ಮಗುವಿನ ನೈಜ ಮತ್ತು ಗೋಪ್ಯತೆಯ ಹಕ್ಕನ್ನು ಪ್ರತಿಯೊಬ್ಬ ವ್ಯಕ್ತಿಯು ಎಲ್ಲಾ ರೀತಿಯಿಂದಲೂ ಮತ್ತು ಮಗುವಿಗೆ ಸಂಬಂಧಿಸಿದ ನ್ಯಾಯಿಕ ಪ್ರಕ್ರಿಯೆ ಎಲ್ಲಾ ಹಂತಗಳಲ್ಲೂ ಸಂರಕ್ಷಿಸಬೇಕಾದುದು ಮತ್ತು ಗೌರವಿಸಬೇಕಾದುದು ಅವಶ್ಯವಾಗಿರುವುದರಿಂದ;

ಮಗುವಿನ ಸ್ವಸ್ಥ ಶಾರೀರಿಕ, ಭಾವನಾತ್ಮಕ, ಬೌದ್ಧಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಸುನಿಶ್ಚಿತಪಡಿಸಿಕೊಳ್ಳಲು, ಪ್ರತಿಯೊಂದು ಹಂತದಲ್ಲೂ, ಮಗುವಿನ ಅತ್ಯುತ್ತಮ ಹಿತಾಸಕ್ತಿಯನ್ನು ಮತ್ತು ಯೋಗಕ್ಷೇಮವನ್ನು ಅತ್ಯಂತ ಪ್ರಾಮುಖ್ಯತೆಯೆಂದು ಪರಿಗಣಿಸುವಂಥ ರೀತಿಯಲ್ಲಿ ಕಾನೂನನ್ನು ಜಾರಿಗೊಳಿಸುವುದು ಅತ್ಯಗತ್ಯವಾಗಿರುವುದರಿಂದ;

ಮಗುವಿನ ಹಕ್ಕುಗಳ ಕುರಿತ ಒಡಂಬಡಿಕೆಗೆ ಪಕ್ಷಕಾರರಾಗಿರುವ ಎಲ್ಲಾ ರಾಷ್ಟ್ರಗಳೂ,–

(ಎ) ಯಾವುದೇ ಕಾನೂನುಬಾಹಿರ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವಂತೆ ಮಗುವನ್ನು ಪ್ರೇರೇಪಿಸುವುದನ್ನು ಅಥವಾ ಬಲಾತ್ಕಾರ ಮಾಡುವುದನ್ನು;

(ಬಿ) ಮಕ್ಕಳನ್ನು ಶೋಷಣೆ ಮಾಡಿ ವೇಶ್ಯಾವೃತ್ತಿಯಲ್ಲಿ ಅಥವಾ ಇತರೆ ಕಾನೂನುಬಾಹಿರ ಲೈಂಗಿಕ ಕ್ರಿಯೆಗಳಲ್ಲಿ ತೊಡಗಿಸುವುದನ್ನು;

(ಸಿ) ಮಕ್ಕಳನ್ನು ಶೋಷಣೆ ಮಾಡಿ ಕಾಮ ಪ್ರಚೋದಕ ಪ್ರದರ್ಶನಗಳಲ್ಲಿ ಮತ್ತು ಸಾಹಿತ್ಯದಲ್ಲಿ ಬಳಸಿಕೊಳ್ಳುವುದನ್ನು;

– ತಡೆಗಟ್ಟಲು ಸಮುಚಿತವಾದ ಎಲ್ಲಾ ರಾಷ್ಟ್ರೀಯ, ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯವಾಗಿರುವುದರಿಂದ;

ಮತ್ತು ಮಕ್ಕಳನ್ನು ಲೈಂಗಿಕವಾಗಿ ಶೋಷಣೆ ಮಾಡುವುದು ಮತ್ತು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಳ್ಳುವುದು ಹೇಯ ಅಪರಾಧಗಳಾಗಿರುವುದರಿಂದ ಮತ್ತು ಅವುಗಳ ಬಗ್ಗೆ ಪರಿಣಾಮಕಾರಿ ಕ್ರಮ ಕೈಗೊಳ್ಳುವುದು ಅತ್ಯಗತ್ಯವಾಗಿರುವುದರಿಂದ;

ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ –I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ * ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ತೀವ್ರತರ ಲಿಂಗಭೇದಕ ಲೈಂಗಿಕ ಅತ್ಯಾಚಾರ" ಪದಾವಳಿಯು 5ನೇ ಪ್ರಕರಣದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರುತ್ತದೆ;

(ಬಿ) "ತೀವ್ರತರ ಲೈಂಗಿಕ ಅತ್ಯಾಚಾರ" ಪದಾವಳಿಯು 9ನೇ ಪ್ರಕರಣದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರುತ್ತದೆ;

* ನವೆಂಬರ್ 14, 2012 ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ. ಎಸ್.ಓ 2705 (ಇ) ದಿನಾಂಕ: ನವೆಂಬರ್ 9, 2012 – ಭಾರತ ಸರ್ಕಾರದ ವಿಶೇಷ ಗೆಜೆಟ್ ಭಾಗ –II ಪ್ರಕರಣ 3 (ii) ನೋಡಿ

(ಸಿ) "ಸಶಸ್ತ್ರ ಪಡೆಗಳು ಅಥವಾ ಭದ್ರತಾ ಪಡೆಗಳು" ಎಂದರೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂಥ ಒಕ್ಕೂಟ ಸಶಸ್ತ್ರ ಪಡೆಗಳು ಅಥವಾ ಭದ್ರತಾ ಪಡೆಗಳು ಅಥವಾ ಪೊಲೀಸ್ ಪಡೆಗಳು;

(ಡಿ) "ಮಗು" ಎಂದರೆ ಹದಿನೆಂಟು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾರೇ ವ್ಯಕ್ತಿ;

(ಇ) "ಕೌಟುಂಬಿಕ ಸಂಬಂಧ" ಪದಾವಳಿಯು ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005ರ 2ನೇ ಪ್ರಕರಣದ (ಎಫ್) ಖಂಡದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಎಫ್) "ಅಂಗಭೇದಕ ಲೈಂಗಿಕ ಅತ್ಯಾಚಾರ" ಪದಾವಳಿಯು 3ನೇ ಪ್ರಕರಣದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

(ಜಿ) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಚ್) "ಧಾರ್ಮಿಕ ಸಂಸ್ಥೆ" ಪದಾವಳಿಯು ಧಾರ್ಮಿಕ ಸಂಸ್ಥೆಗಳ (ದುರುಪಯೋಗ ನಿವಾರಣೆ) ಅಧಿನಿಯಮ, 1988 ರ 41ರಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಐ) "ಲೈಂಗಿಕ ಅತ್ಯಾಚಾರ" ಪದಾವಳಿಯು 7ನೇ ಪ್ರಕರಣದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಜೆ) "ಲೈಂಗಿಕ ಕಿರುಕುಳ" ಪದಾವಳಿಯು 11ನೇ ಪ್ರಕರಣದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಕೆ) "ಕೂಡು ಕುಟುಂಬದ ವಾಸದ ಮನೆ" ಎಂದರೆ ಆರೋಪಕ್ಕೆ ಒಳಗಾಗಿರುವ ವ್ಯಕ್ತಿಯು, ಯಾವ ಕುಟುಂಬದಲ್ಲಿ, ಕೌಟಂಬಿಕ ಸಂಬಂಧವುಳ್ಳನಾಗಿ ಮಗುವಿನೊಂದಿಗೆ ವಾಸಿಸುತ್ತಿರುವನೋ ಅಥವಾ ಯಾವುದೇ ಕಾಲದಲ್ಲಿ ವಾಸವಾಗಿದ್ದನೋ ಆ ಕುಟುಂಬ;

(ಎಲ್) "ವಿಶೇಷ ನ್ಯಾಯಾಲಯ" ಎಂದರೆ 28ನೇ ಪ್ರಕರಣದ ಮೇರೆಗೆ ವಿಶೇಷ ನ್ಯಾಯಾಲಯವೆಂದು ಹೆಸರಿಸಿದ ನ್ಯಾಯಾಲಯ;

(ಎಂ) "ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್" ಎಂದರೆ 32ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪಬ್ಲಿಕ್ ಪ್ರಾಸಿಕ್ಯೂಟರ್.

(2) ಈ ಅಧಿನಿಯಮದಲ್ಲಿ ಬಳಸಿರುವ ಮತ್ತು ಪರಿಭಾಷಿಸಿರದ, ಆದರೆ ಭಾರತ ದಂಡ ಸಂಹಿತೆ, ದಂಡ ಪ್ರಕ್ರಿಯಾ ಸಂಹಿತೆ, 1973, (1974ರ 2) ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 (2000ರ 56) ಮತ್ತು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ರ 21) ಇವುಗಳಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಸದರಿ ಸಂಹಿತೆಗಳಲ್ಲಿ ಅಥವಾ ಅಧಿನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ –II

## ಮಕ್ಕಳ ಮೇಲೆ ಎಸಗುವ ಲೈಂಗಿಕ ಅಪರಾಧಗಳು

### ಎ. ಅಂಗಭೇದಕ ಲೈಂಗಿಕ ಅತ್ಯಾಚಾರ ಮತ್ತು ಅದಕ್ಕಾಗಿ ಶಿಕ್ಷೆ

**3. ಅಂಗಭೇದಕ ಲೈಂಗಿಕ ಅತ್ಯಾಚಾರ.–** ವ್ಯಕ್ತಿಯು,

(ಎ) ತನ್ನ ಶಿಶ್ನವನ್ನು, ಮಗುವಿನ ಯೋನಿಯ, ಬಾಯಿಯ, ಮೂತ್ರನಾಳದ ಅಥವಾ ಗುದದೊಳಗೆ, ಅವನಿಂದ ಎಷ್ಟಾಗುತ್ತದೋ ಅಷ್ಟು ಒಳಗೆ ತೂರಿಸಿದರೆ ಅಥವಾ ತನಗೆ ಅಥವಾ ಯಾರೇ ಇತರ ವ್ಯಕ್ತಿಗೆ ಆ ಮಗುವು ಹಾಗೆ ಮಾಡುವಂತೆ ಮಾಡಿದರೆ; ಅಥವಾ

(ಬಿ) ಲೈಂಗಿಕ ಉದ್ರೇಕ ಉಂಟು ಮಾಡುವ, ಯಾವುದೇ ವಸ್ತುವನ್ನು ಅಥವಾ ಶಿಶ್ನ ಅಲ್ಲದ ದೇಹದ ಯಾವುದೇ ಭಾಗವನ್ನು ಮಗುವಿನ ಯೋನಿಯ, ಮೂತ್ರನಾಳದ ಅಥವಾ ಗುದದೊಳಗೆ, ಅವನಿಂದ ಎಷ್ಟಾಗುತ್ತದೋ ಅಷ್ಟು ಒಳಗೆ ಸೇರಿಸಿದರೆ, ತನಗೆ ಅಥವಾ ಯಾರೇ ಇತರ ವ್ಯಕ್ತಿಗೆ ಆ ಮಗುವು ಹಾಗೆ ಮಾಡುವಂತೆ ಮಾಡಿದರೆ; ಅಥವಾ

(ಸಿ) ಮಗುವಿನ ಯೋನಿಯ, ಮೂತ್ರನಾಳದ, ಗುದದ ಅಥವಾ ದೇಹದ ಯಾವುದೇ ಭಾಗದ ಒಳಗೆ ತೂರಿಸಲು ಅನುವಾಗುವಂತೆ ಮಗುವಿನ ದೇಹದ ಯಾವುದೇ ಭಾಗವನ್ನು ಆತ ಉದ್ರೇಕಿಸಿದರೆ ಅಥವಾ ತನಗೆ ಅಥವಾ ಯಾರೇ ಇತರ ವ್ಯಕ್ತಿಗೆ ಆ ಮಗುವು ಹಾಗೆ ಮಾಡುವಂತೆ ಮಾಡಿದರೆ; ಅಥವಾ

(ಡಿ) ಮಗುವಿನ ಶಿಶ್ನಕ್ಕೆ, ಯೋನಿಗೆ, ಗುದಕ್ಕೆ, ಮೂತ್ರನಾಳಕ್ಕೆ ತನ್ನ ಬಾಯಿಯನ್ನು ಹಾಕಿದರೆ ಅಥವಾ ಮಗುವು ಅಂಥ ವ್ಯಕ್ತಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ಹಾಗೆ ಮಾಡುವಂತೆ ಮಾಡಿದರೆ,

– ಅವನು "ಅಂಗಭೇದಕ ಲೈಂಗಿಕ ಅತ್ಯಾಚಾರ"ವನ್ನು ಎಸಗಿದ್ದಾನೆಂದು ಹೇಳಲಾಗುತ್ತದೆ.

**4. ಅಂಗಭೇದಕ ಲೈಂಗಿಕ ಅತ್ಯಾಚಾರಕ್ಕೆ ಶಿಕ್ಷೆ.–** ಯಾರಾದರೂ ಅಂಗಭೇದಕ ಲೈಂಗಿಕ ಅತ್ಯಾಚಾರವನ್ನು ಎಸಗಿದರೆ, ಅವನು ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗಿನ ಕಾರಾವಾಸದಿಂದ, ಆದರೆ ಜೀವಾವಧಿ ಕಾರಾವಾಸದವರೆಗೆ ವಿಸ್ತರಿಸಬಹುದಾದಂಥ, ಎರಡರಲ್ಲೊಂದು ಬಗೆಯ ಕಾರವಾಸದ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

ಬಿ. ತೀವ್ರತರ ಲಿಂಗಭೇದಕ ಲೈಂಗಿಕ ಅತ್ಯಾಚಾರ ಮತ್ತು ಅದಕ್ಕೆ ಶಿಕ್ಷೆ

5. ತೀವ್ರತರ ಲಿಂಗಭೇದಕ ಲೈಂಗಿಕ ಅತ್ಯಾಚಾರ.– (ಎ) ಪೊಲೀಸ್ ಅಧಿಕಾರಿಯಾಗಿರುವ ಯಾರಾದರೂ,–

(i) ಅವನು, ಯಾವ ಪೊಲೀಸ್ ಠಾಣೆಗೆ ನೇಮಕಗೊಂಡಿರುವನೋ ಆ ಪೊಲೀಸ್ ಠಾಣೆಯ ಅಥವಾ ಅದರ ಆವರಣಗಳ ಸರಹದ್ದಿನ ಒಳಗೆ; ಅಥವಾ

(ii) ಸ್ಟೇಷನ್ ಹೌಸ್, ಅವನು ಯಾವ ಪೊಲೀಸ್ ಠಾಣೆಗೆ ನೇಮಕಗೊಂಡಿರುವನೋ ಆ ಪೊಲೀಸ್ ಠಾಣೆಯಲ್ಲಿ, ಸ್ಟೇಷನ್ ಹೌಸ್ ಇರಲಿ ಅಥವಾ ಇಲ್ಲದಿರಲಿ, ಆ ಯಾವುದೇ ಸ್ಟೇಷನ್ ಹೌಸ್‌ನ ಆವರಣದಲ್ಲಿ; ಅಥವಾ

(iii) ಅವನು, ಅವನ ಕರ್ತವ್ಯಗಳಲ್ಲಿ ನಿರತನಾಗಿದ್ದಾಗ ಅಥವಾ ಅನ್ಯಥಾ; ಅಥವಾ

(iv) ಅವನು ಪೊಲೀಸ್ ಅಧಿಕಾರಿ ಎಂದು ಪರಿಚಿತನಾಗಿರುವಲ್ಲಿ ಅಥವಾ ಹಾಗೆಂದು ಗುರುತಿಸಲ್ಪಟ್ಟಿರುವಲ್ಲಿ ಆ ವ್ಯಕ್ತಿಯು

– ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ ಅಥವಾ;

(ಬಿ) ಸಶಸ್ತ್ರ ಪಡೆಗಳ ಅಥವಾ ಭದ್ರತಾ ಪಡೆಗಳ ಸದಸ್ಯನಾಗಿರುವ ಯಾರಾದರೂ,–

(i) ವ್ಯಕ್ತಿಯು ಯಾವ ಪ್ರದೇಶಕ್ಕೆ ನಿಯೋಜನೆಗೊಂಡಿರುವನೋ ಆ ಪ್ರದೇಶದ ಎಲ್ಲೆಗಳೊಳಗೆ; ಅಥವಾ

(ii) ಪಡೆಗಳ ಅಥವಾ ಸಶಸ್ತ್ರ ಪಡೆಗಳ ಆದಿಪತ್ಯಕ್ಕೆ ಒಳಪಟ್ಟಿರುವ ಯಾವುದೇ ಪ್ರದೇಶಗಳಲ್ಲಿ; ಅಥವಾ

(iii) ಅವನು, ಅವನ ಕರ್ತವ್ಯಗಳಲ್ಲಿ ನಿರತನಾಗಿದ್ದಾಗ ಅಥವಾ ಅನ್ಯಥಾ; ಅಥವಾ

(iv) ಸದರಿ ವ್ಯಕ್ತಿಯು ಭದ್ರತಾ ಪಡೆಗಳ ಅಥವಾ ಸಶಸ್ತ್ರ ಪಡೆಗಳ ಸದಸ್ಯನೆಂದು ಪರಿಚಿತವಾಗಿರುವಲ್ಲಿ ಅಥವಾ ಹಾಗೆಂದು ಗುರುತಿಸಲ್ಪಟ್ಟಿರುವಲ್ಲಿ ಆ ವ್ಯಕ್ತಿಯು

– ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಸಿ) ಲೋಕ ನೌಕರನಾಗಿರುವ ಯಾರಾದರೂ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಹಲ್ಲೆ ಅತ್ಯಾಚಾರ ಎಸಗಿದರೆ; ಅಥವಾ

(ಡಿ) ಜೈಲಿನ ಅಥವಾ ರಿಮ್ಯಾಂಡ್ ಹೋಂನ ಅಥವಾ ಸಂರಕ್ಷಣಾಲಯದ, ಅಥವಾ ಪರಿವೀಕ್ಷಣಾಲಯದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಸ್ಥಾಪಿಸಿದ ಅಭಿರಕ್ಷೆಯ ಅಥವಾ ಪಾಲನೆಯ ಮತ್ತು ರಕ್ಷಣೆಯ ಇತರ ಯಾವುದೇ ಸ್ಥಳದ ಆಡಳಿತ ವರ್ಗದಲ್ಲಿರುವ ಅಥವಾ ಸಿಬ್ಬಂದಿಯಾಗಿರುವ ಯಾರಾದರೂ ಅಂಥ ಜೈಲಿನ, ರಿಮ್ಯಾಂಡ್ ಹೋಂನ, ಸಂರಕ್ಷಣಾಲಯದ, ಪರಿವೀಕ್ಷಣಾಲಯದ ಅಥವಾ ಅಭಿರಕ್ಷೆಯ ಅಥವಾ ಪಾಲನೆ ಮತ್ತು ರಕ್ಷಣೆಯ ಇತರ ಯಾವುದೇ ಸ್ಥಳದ ನಿವಾಸಿಯಾಗಿರುವ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಇ) ಆಸ್ಪತ್ರೆಯು, ಸರ್ಕಾರಿ ಆಸ್ಪತ್ರೆಯಾಗಿರಲಿ ಅಥವಾ ಖಾಸಗಿ ಆಸ್ಪತ್ರೆಯಾಗಿರಲಿ, ಅದರ ಆಡಳಿತ ವರ್ಗದಲ್ಲಿರುವ ಅಥವಾ ಸಿಬ್ಬಂದಿಯಾಗಿರುವ ಯಾರಾದರೂ, ಆ ಆಸ್ಪತ್ರೆಯಲ್ಲಿರುವ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಎಫ್) ಶೈಕ್ಷಣಿಕ ಸಂಸ್ಥೆಯ ಅಥವಾ ಧಾರ್ಮಿಕ ಸಂಸ್ಥೆಯ ಆಡಳಿತ ವರ್ಗದಲ್ಲಿರುವ ಅಥವಾ ಸಿಬ್ಬಂದಿಯಾಗಿರುವ ಯಾರಾದರೂ, ಆ ಸಂಸ್ಥೆಯಲ್ಲಿರುವ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಜಿ) ಮಗುವಿನ ಮೇಲೆ ಸಾಮೂಹಿಕ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ;

**ವಿವರಣೆ:** ಒಂದು ಗುಂಪಿನ ಒಬ್ಬನಿಂದ ಅಥವಾ ಹೆಚ್ಚು ವ್ಯಕ್ತಿಗಳಿಂದ, ಅವನಿಗಿದ್ದ ಅಥವಾ ಅವರಿಗಿದ್ದ ಸಾಮಾನ್ಯ ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಒಂದು ಮಗುವು ಲೈಂಗಿಕ ಅತ್ಯಾಚಾರಕ್ಕೆ ಒಳಗಾದಾಗ, ಅಂಥ ವ್ಯಕ್ತಿಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯನ್ನು ಈ ಖಂಡದ ಅರ್ಥ ವ್ಯಾಪ್ತಿಯೊಳಗೆ ಸಾಮೂಹಿಕ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದ್ದಾನೆಂದು ಭಾವಿಸತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು, ಅವನೊಬ್ಬನೆ ಆ ಕೃತ್ಯವನ್ನು ಎಸಗಿದ್ದರೆ, ಹೇಗೆ ಯಾವ ರೀತಿಯಲ್ಲಿ ಹೊಣೆಗಾರನಾಗುತ್ತಿದ್ದನೋ ಹಾಗೆಯೇ ಅದೇ ರೀತಿಯಲ್ಲಿ ಆ ಕೃತ್ಯಕ್ಕೆ ಹೊಣೆಗಾರನಾಗತಕ್ಕದ್ದು; ಅಥವಾ

(ಎಚ್) ಯಾರಾದರೂ ಮಾರಕ ಆಯುಧವನ್ನು, ಬೆಂಕಿಯನ್ನು, ಕಾಯಿಸಿದ ವಸ್ತುವನ್ನು ಅಥವಾ ಕ್ಷಾರಕ ಪದಾರ್ಥವನ್ನು ಬಳಸಿ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರವನ್ನು ಎಸಗಿದರೆ; ಅಥವಾ

(ಐ) ಯಾರಾದರೂ, ತೀವ್ರವಾದ ಗಾಯವಾಗುವಂತೆ ಅಥವಾ ದೇಹಕ್ಕೆ ಹಾನಿಯಾಗುವಂತೆ ಮತ್ತು ಗಾಯವಾಗುವಂತೆ ಅಥವಾ ಮಗುವಿನ ಲೈಂಗಿಕ ಅಂಗಗಳಿಗೆ ಗಾಯವಾಗುವಂತೆ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರವನ್ನು ಎಸಗಿದರೆ; ಅಥವಾ

(ಜೆ) ಯಾರಾದರೂ ಮಗುವಿನ ಮೇಲೆ,

(i) ಮಗುವನ್ನು ದೈಹಿಕವಾಗಿ ಅಸಮರ್ಥಗೊಳಿಸುವಂಥ ಅಥವಾ ಮಾನಸಿಕ ಆರೋಗ್ಯ ಅಧಿನಿಯಮ, 1987ರ 2ನೇ ಪ್ರಕರಣದ (ಬಿ)ಖಂಡದಲ್ಲಿ ಪರಿಭಾಷಿಸಿರುವಂತೆ, ಮಗುವು ಮಾನಸಿಕವಾಗಿ ಅಸ್ವಸ್ಥಗೊಳ್ಳುವಂತೆ ಮಾಡುವಂಥ ಅಥವಾ ಮಗುವು ತನ್ನ ನಿಯತ ಕೆಲಸಕಾರ್ಯಗಳನ್ನು ಮಾಡಲಾಗದ ಹಾಗೆ ಯಾವುದೇ ಬಗೆಯ ದುರ್ಬಲತೆಯನ್ನು ತಾತ್ಕಾಲಿಕವಾಗಿಯಾಗಲಿ ಅಥವಾ ಶಾಶ್ವತವಾಗಿಯಾಗಲಿ ಉಂಟು ಮಾಡುವಂಥ; ಅಥವಾ

(ii) ಮಗುವು, ಹೆಣ್ಣು ಮಗುವು ಆಗಿದ್ದರೆ ಲೈಂಗಿಕ ಅತ್ಯಾಚಾರದಿಂದಾಗಿ ಆ ಮಗುವನ್ನು ಗರ್ಭವತಿಯನ್ನಾಗಿಸುವಂಥ; ಅಥವಾ

(iii) ಮಗುವು ತನ್ನ ನಿಯತ ಕೆಲಸಕಾರ್ಯಗಳನ್ನು ಮಾಡಲು ದೈಹಿಕವಾಗಿ ಅಸಮರ್ಥವಾಗುವಂತೆ ಮಾಡಿ ಅಥವಾ ಮಾನಸಿಕವಾಗಿ ಅಸ್ವಸ್ಥವಾಗುವಂತೆ ಮಾಡಿ ಅದನ್ನು ತಾತ್ಕಾಲಿಕವಾಗಿಯಾಗಲಿ ಅಥವಾ ಶಾಶ್ವತವಾಗಿಯಾಗಲಿ ದುರ್ಬಲಗೊಳಿಸಬಹುದಾದ, ಹ್ಯೂಮನ್ ಇಮ್ಯುನೋ ಡಿಫಿಸಿಯನ್ಸಿ ವೈರಸ್ ಸೋಂಕನ್ನು ಮಗುವಿಗೆ ತಗುಲಿಸುವಂಥ ಅಥವಾ ಮಗುವಿಗೆ ಯಾವುದೇ ಮಾರಣಾಂತಿಕ ಕಾಯಿಲೆಯನ್ನು ಉಂಟು ಮಾಡುವಂಥ ಅಥವಾ ಯಾವುದೇ ಸೋಂಕನ್ನು ಅಂಟಿಸುವಂಥ

– ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ

(ಕೆ) ಮಗುವಿನ ಮಾನಸಿಕ ಅಥವಾ ದೈಹಿಕ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು, ಮಗುವಿನ ಮೇಲೆ ಯಾರಾದರೂ ಅಂಗಭೇದಕ ಲೈಂಗಿಕ ಅತ್ಯಾಚಾರವನ್ನು ಎಸಗಿದರೆ; ಅಥವಾ

(ಎಲ್) ಯಾರಾದರೂ, ಒಂದಕ್ಕಿಂತ ಹೆಚ್ಚು ಸಲ ಅಥವಾ ಪದೇಪದೇ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರವನ್ನು ಎಸಗಿದರೆ;

(ಎಂ) ಯಾರಾದರೂ ಹನ್ನೆರಡು ವರ್ಷಗಳಿಗಿಂತ ಕಡಿಮೆ ವಯೋಮಾನದ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರವನ್ನು ಎಸಗಿದರೆ;

(ಎನ್) ರಕ್ತ ಸಂಬಂಧದಿಂದಾಗಿ ಅಥವಾ ದತ್ತಕದ ಮೂಲಕ ಅಥವಾ ವಿವಾಹದಿಂದಾಗಿ ಅಥವಾ ಪೋಷಕತ್ವದಿಂದಾಗಿ ಅಥವಾ ಪಾಲಕತ್ವದಿಂದಾಗಿ ಅಥವಾ ಮಗುವಿನ ಪಾಲನೆ ಪೋಷಣೆಯನ್ನು ನೋಡಿಕೊಳ್ಳುತ್ತಿರುವ ಕಾರಣದಿಂದಾಗಿ ಮಗುವಿನ ಸಂಬಂಧಿಯಾಗಿರುವ ಅಥವಾ ಮಗುವಿನ ತಂದೆ ತಾಯಿಯೊಂದಿಗೆ ಕೌಟುಂಬಿಕ ಸಂಬಂಧವನ್ನು ಹೊಂದಿರುವ ಅಥವಾ ಮಗುವಿನೊಂದಿಗೆ ಅದೇ ಕುಟುಂಬ ವಾಸದ ಮನೆಯಲ್ಲಿ ಅಥವಾ ಕೂಡು ಕುಟುಂಬದ ವಾಸದ ಮನೆಯಲ್ಲಿ ವಾಸಿಸುತ್ತಿರುವ ಯಾರಾದರೂ ಅಂಥ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರವನ್ನು ಎಸಗಿದರೆ; ಅಥವಾ

(ಒ) ಮಗುವಿಗೆ ಸೇವೆಯನ್ನು ಒದಗಿಸುತ್ತಿರುವ ಯಾವುದೇ ಸಂಸ್ಥೆಯ ಒಡೆತನದಲ್ಲಿರುವ ಅಥವಾ ಆಡಳಿತ ಮಂಡಳಿಯಲ್ಲಿರುವ ಅಥವಾ ಸಿಬ್ಬಂದಿಯಾಗಿರುವ ಯಾರಾದರೂ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಪಿ) ಮಗುವಿನ ವಿಶ್ವಾಸಕ್ಕೆ ಪಾತ್ರವಾಗಿರುವ ಅಥವಾ ಮಗುವಿನ ಮೇಲೆ ಅಧಿಕಾರ ಹೊಂದಿರುವ ಯಾರಾದರೂ ಒಂದು ಸಂಸ್ಥೆಯಲ್ಲಿ ಅಥವಾ ಮಗುವಿನ ಮನೆಯಲ್ಲಿ ಅಥವಾ ಯಾವುದೇ ಇತರ ಜಾಗದಲ್ಲಿ, ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಕ್ಯೂ) ಮಗುವು ಗರ್ಭಿಣಿ ಎನ್ನುವುದು ಗೊತ್ತಿದ್ದು, ಆ ಮಗುವಿನ ಮೇಲೆ ಯಾರಾದರೂ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಆರ್) ಯಾರಾದರೂ, ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿ, ಆ ಮಗುವನ್ನು ಹತ್ಯೆ ಮಾಡಲು ಪ್ರಯತ್ನಿಸಿದರೆ; ಅಥವಾ

(ಎಸ್) ಯಾರಾದರೂ, ಕೋಮುಗಲಭೆಯ ಅಥವಾ ಮತೀಯ ಹಿಂಸಾಚಾರದ ಸಮಯದಲ್ಲಿ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಟಿ) ಯಾರಾದರೂ, ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಎಸಗಿದ್ದಕ್ಕಾಗಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಲೈಂಗಿಕ ಅಪರಾಧಕ್ಕಾಗಿ ಈ ಹಿಂದೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ;

(ಯು) ಯಾರಾದರೂ, ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ ಮತ್ತು ಆ ಮಗುವನ್ನು ವಿವಸ್ತ್ರಗೊಳಿಸಿದರೆ ಅಥವಾ ಸಾರ್ವಜನಿಕವಾಗಿ ಬೆತ್ತಲೆ ಮೆರವಣಿಗೆ ಮಾಡಿದರೆ

– ಅವನು ತೀವ್ರತರ ಲಿಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದ್ದಾನೆಂದು ಹೇಳಲಾಗುತ್ತದೆ.

**6. ತೀವ್ರತರ ಲಿಂಗಭೇದಕ ಲೈಂಗಿಕ ಅತ್ಯಾಚಾರಕ್ಕೆ ಶಿಕ್ಷೆ.**– ಯಾರಾದರೂ, ತೀವ್ರತರ ಲಿಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದರೆ ಅವನು, ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಜೀವಾವಧಿ ಕಾರಾವಾಸ ಶಿಕ್ಷೆಗೆ ವಿಸ್ತರಿಸಬಹುದಾದಂಥ ಅವಧಿಯ ಕಠಿಣ ಕಾರಾವಾಸ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**ಸಿ. ಲೈಂಗಿಕ ಅತ್ಯಾಚಾರ ಮತ್ತು ಅದಕ್ಕಾಗಿ ಶಿಕ್ಷೆ**

**7. ಲೈಂಗಿಕ ಅತ್ಯಾಚಾರ.**– ಯಾರಾದರೂ, ಲೈಂಗಿಕ ಉದ್ದೇಶದಿಂದ ಮಗುವಿನ ಯೋನಿಯನ್ನು, ಶಿಶ್ನವನ್ನು, ಗುದವನ್ನು ಅಥವಾ ಮೊಲೆಯನ್ನು ಮುಟ್ಟಿದರೆ ಅಥವಾ ಅಂಥ ವ್ಯಕ್ತಿಯ ಅಥವಾ ಯಾರೇ ಇತರ ವ್ಯಕ್ತಿಯ ಯೋನಿಯನ್ನು, ಶಿಶ್ನವನ್ನು, ಗುದವನ್ನು ಅಥವಾ ಮೊಲೆಯನ್ನು ಮಗುವು ಮುಟ್ಟುವಂತೆ ಮಾಡಿದರೆ ಅಥವಾ ಲಿಂಗಭೇದನೆ ಇಲ್ಲದ ದೈಹಿಕ ಸಂಪರ್ಕವನ್ನು ಒಳಗೊಳ್ಳುವಂಥ ಲೈಂಗಿಕ ಉದ್ದೇಶದಿಂದ ಯಾವುದೇ ಇತರ ಕೃತ್ಯವನ್ನು ಎಸಗಿದರೆ ಅವನು ಲೈಂಗಿಕ ಅತ್ಯಾಚಾರ ಎಸಗಿರುವನೆಂದು ಹೇಳಲಾಗುತ್ತದೆ.

**8. ಲೈಂಗಿಕ ಅತ್ಯಾಚಾರ ಎಸಗಿದ್ದಕ್ಕಾಗಿ ಶಿಕ್ಷೆ.**– ಯಾರಾದರೂ, ಲೈಂಗಿಕ ಅತ್ಯಾಚಾರ ಎಸಗಿದರೆ ಅವನು ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಎರಡರಲ್ಲೊಂದು ಬಗೆಯ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**ಡಿ. ತೀವ್ರತರ ಲೈಂಗಿಕ ಅತ್ಯಾಚಾರ ಮತ್ತು ಅದಕ್ಕಾಗಿ ಶಿಕ್ಷೆ.**

**9. ತೀವ್ರತರ ಲೈಂಗಿಕ ಅತ್ಯಾಚಾರ.**– (ಎ) ಪೊಲೀಸ್ ಅಧಿಕಾರಿಯಾಗಿರುವ ಯಾರಾದರೂ,–

(i) ಯಾವ ಪೊಲೀಸ್ ಠಾಣೆಗೆ ಅವನು ನೇಮಕಗೊಂಡಿರುವನೋ ಆ ಪೊಲೀಸ್ ಠಾಣೆಯ ಅಥವಾ ಅದರ ಆವರಣಗಳ ಸರಹದ್ದಿನ ಒಳಗೆ; ಅಥವಾ

(ii) ಸ್ಟೇಷನ್ ಹೌಸ್, ಅವನು ಯಾವ ಪೊಲೀಸ್ ಠಾಣೆಗೆ ನೇಮಕ ಗೊಂಡಿರುವನೋ ಆ ಪೊಲೀಸ್ ಠಾಣೆಯಲ್ಲಿ ಸ್ಟೇಷನ್ ಹೌಸ್ ಇರಲಿ ಅಥವಾ ಇಲ್ಲದಿರಲಿ ಆ ಯಾವುದೇ ಸ್ಟೇಷನ್ ಹೌಸ್‌ನ ಆವರಣದಲ್ಲಿ; ಅಥವಾ

(iii) ಅವನು, ಅವನ ಕರ್ತವ್ಯಗಳಲ್ಲಿ ನಿರತನಾಗಿದ್ದಾಗ ಅಥವಾ ಅನ್ಯಥಾ; ಅಥವಾ

(iv) ಅವನು ಪೊಲೀಸ್ ಅಧಿಕಾರಿ ಎಂದು ಪರಿಚಿತನಾಗಿರುವಲ್ಲಿ ಅಥವಾ ಹಾಗೆಂದು ಗುರುತಿಸಲ್ಪಟ್ಟಿರುವಲ್ಲಿ ಆ ವ್ಯಕ್ತಿಯು

– ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ ಅಥವಾ;

(ಬಿ) ಸಶಸ್ತ್ರ ಪಡೆಗಳ ಅಥವಾ ಭದ್ರತಾ ಪಡೆಗಳ ಸದಸ್ಯನಾಗಿರುವ ಯಾರಾದರೂ,–

(i) ವ್ಯಕ್ತಿಯು ಯಾವ ಪ್ರದೇಶಕ್ಕೆ ನಿಯೋಜನೆಗೊಂಡಿರುವನೋ ಆ ಪ್ರದೇಶದ ಎಲ್ಲೆಗಳೊಳಗೆ; ಅಥವಾ

(ii) ಭದ್ರತಾ ಪಡೆಗಳ ಅಥವಾ ಸಶಸ್ತ್ರ ಪಡೆಗಳ ಆದಿಪತ್ಯಕ್ಕೆ ಒಳಪಟ್ಟಿರುವ ಯಾವುದೇ ಪ್ರದೇಶಗಳಲ್ಲಿ; ಅಥವಾ

(iii) ಅವನು, ಅವನ ಕರ್ತವ್ಯಗಳಲ್ಲಿ ನಿರತನಾಗಿದ್ದಾಗ ಅಥವಾ ಅನ್ಯಥಾ; ಅಥವಾ

(iv) ಸದರಿ ವ್ಯಕ್ತಿಯು ಭದ್ರತಾ ಪಡೆಗಳ ಅಥವಾ ಸಶಸ್ತ್ರ ಪಡೆಗಳ ಸದಸ್ಯನೆಂದು ಪರಿಚಿತನಾಗಿರುವ ಅಥವಾ ಗುರುತಿಸಲ್ಪಟ್ಟಿರುವ ಆ ವ್ಯಕ್ತಿಯು;

– ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಸಿ) ಲೋಕ ನೌಕರನಾಗಿರುವ ಯಾರಾದರೂ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಡಿ) ಜೈಲಿನ ಅಥವಾ ರಿಮಾಂಡ್ ಹೋಂನ ಅಥವಾ ಸಂರಕ್ಷಣಾಲಯದ, ಅಥವಾ ಪರಿವೀಕ್ಷಣಾಲಯದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಿದ ಅಭಿರಕ್ಷೆಯ ಅಥವಾ ಪಾಲನೆಯ ಮತ್ತು ರಕ್ಷಣೆಯ ಇತರ ಯಾವುದೇ ಸ್ಥಳದ ಆಡಳಿತ ವರ್ಗದಲ್ಲಿರುವ ಅಥವಾ ಸಿಬ್ಬಂದಿಯಾಗಿರುವ ಯಾರಾದರೂ ಅಂಥ ಜೈಲಿನ ಅಥವಾ ರಿಮ್ಯಾಂಡ್ ಹೋಂನ, ಸಂರಕ್ಷಣಾಲಯದ ಅಥವಾ ಪರಿವೀಕ್ಷಣಾಲಯದ ಅಥವಾ ಅಭಿರಕ್ಷೆಯ ಅಥವಾ ಪಾಲನೆ ಮತ್ತು ರಕ್ಷಣೆಯ ಇತರ ಯಾವುದೇ ಸ್ಥಳದ ನಿವಾಸಿಯಾಗಿರುವ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಇ) ಆಸ್ಪತ್ರೆಯು ಸರ್ಕಾರಿ ಆಸ್ಪತ್ರೆಯಾಗಿರಲಿ ಅಥವಾ ಖಾಸಗಿ ಆಸ್ಪತ್ರೆಯಾಗಿರಲಿ ಅದರ ಆಡಳಿತ ವರ್ಗದಲ್ಲಿರುವ ಅಥವಾ ಸಿಬ್ಬಂದಿಯಾಗಿರುವ ಯಾರಾದರೂ, ಆ ಆಸ್ಪತ್ರೆಯಲ್ಲಿರುವ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಎಫ್) ಶೈಕ್ಷಣಿಕ ಸಂಸ್ಥೆಯ ಅಥವಾ ಧಾರ್ಮಿಕ ಸಂಸ್ಥೆಯ ಆಡಳಿತ ವರ್ಗದಲ್ಲಿರುವ ಅಥವಾ ಸಿಬ್ಬಂದಿಯಾಗಿರುವ ಯಾರಾದರೂ, ಆ ಸಂಸ್ಥೆಯಲ್ಲಿರುವ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಜಿ) ಯಾರಾದರೂ ಮಗುವಿನ ಮೇಲೆ ಸಾಮೂಹಿಕ ಲೈಂಗಿಕ ಅತ್ಯಾಚಾರ ಎಸಗಿದರೆ;

**ವಿವರಣೆ:** ಒಂದು ಗುಂಪಿನ ಒಬ್ಬನಿಂದ ಅಥವಾ ಹೆಚ್ಚು ವ್ಯಕ್ತಿಗಳಿಂದ, ಅವನಿಗಿದ್ದ ಅಥವಾ ಅವರಿಗಿದ್ದ ಸಮಾನ ಉದ್ದೇಶದ ಸಲುವಾಗಿ ಒಂದು ಮಗುವು ಲೈಂಗಿಕ ಅತ್ಯಾಚಾರಕ್ಕೆ ಒಳಗಾದಾಗ, ಅಂಥ ವ್ಯಕ್ತಿಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯನ್ನು ಈ ಖಂಡದ ಅರ್ಥವ್ಯಾಪ್ತಿಯೊಳಗೆ ಸಾಮೂಹಿಕ ಲೈಂಗಿಕ ಅತ್ಯಾಚಾರ ಎಸಗಿದ್ದಾನೆಂದು ಭಾವಿಸತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು, ಆತನೊಬ್ಬನೆ ಆ ಕೃತ್ಯವನ್ನು ಎಸಗಿದಿದ್ದರೆ, ಹೇಗೆ ಯಾವ ರೀತಿಯಲ್ಲಿ ಹೊಣೆಗಾರನಾಗುತ್ತಿದ್ದನೋ ಹಾಗೆಯೇ ಅದೇ ರೀತಿಯಲ್ಲಿ ಆ ಕೃತ್ಯಕ್ಕೆ ಹೊಣೆಗಾರನಾಗತಕ್ಕದ್ದು; ಅಥವಾ

(ಎಚ್) ಯಾರಾದರೂ ಮಾರಕ ಆಯುಧಗಳನ್ನು, ಬೆಂಕಿಯನ್ನು, ಕಾಯಿಸಿದ ವಸ್ತುವನ್ನು ಅಥವಾ ಕ್ಷಾರಕ ಪದಾರ್ಥವನ್ನು ಬಳಸಿ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಐ) ಯಾರಾದರೂ ತೀವ್ರವಾದ ಗಾಯವಾಗುವಂತೆ ಅಥವಾ ದೇಹಕ್ಕೆ ಹಾನಿಯಾಗುವಂತೆ ಮತ್ತು ಗಾಯವಾಗುವಂತೆ ಅಥವಾ ಮಗುವಿನ ಲೈಂಗಿಕ ಅಂಗಗಳಿಗೆ ಗಾಯವಾಗುವಂತೆ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಜೆ) ಯಾರಾದರೂ, ಮಗುವಿನ ಮೇಲೆ ಎಸಗಿದ ಲೈಂಗಿಕ ಅತ್ಯಾಚಾರದಿಂದಾಗಿ,

(i) ಮಗುವು ದೈಹಿಕವಾಗಿ ಅಸಮರ್ಥವಾದರೆ ಅಥವಾ ಮಾನಸಿಕ ಆರೋಗ್ಯ ಅಧಿನಿಯಮ, 1987ರ 2ನೇ ಪ್ರಕರಣದ (ಎಲ್) ಖಂಡದ ಮೇರೆಗೆ ಪರಿಭಾಷಿಸಿರುವಂತೆ ಮಗುವು ಮಾನಸಿಕವಾಗಿ ಅಸ್ವಸ್ಥಗೊಂಡರೆ ಅಥವಾ ತಾತ್ಕಾಲಿಕವಾಗಿಯಾಗಲಿ ಅಥವಾ ಶಾಶ್ವತವಾಗಿಯಾಗಲಿ ಮಗುವು ತನ್ನ ನಿಯತ ಕ್ರಿಯೆಗಳನ್ನು ಮಾಡಲು ಆಗದ ಹಾಗೆ ಯಾವುದೇ ಬಗೆಯ ದುರ್ಬಲತೆ ಉಂಟಾದರೆ; ಅಥವಾ

(ii) ಮಗುವು ತನ್ನ ನಿಯತ ಕೆಲಸ ಕಾರ್ಯಗಳನ್ನು ಮಾಡಲು ದೈಹಿಕವಾಗಿ ಅಸಮರ್ಥವಾಗುವಂತೆ ಮಾಡಿ ಅಥವಾ ಮಾನಸಿಕವಾಗಿ ಅಸ್ವಸ್ಥವಾಗುವಂತೆ ಮಾಡಿ ಅದನ್ನು ತಾತ್ಕಾಲಿಕವಾಗಿಯಾಗಲಿ ಅಥವಾ ಶಾಶ್ವತವಾಗಿಯಾಗಲಿ ದುರ್ಬಲಗೊಳಿಸಬಹುದಾದ ಹ್ಯೂಮನ್ ಇಮ್ಯುನೋ ಡಿಫಿಸಿಯನ್ಸಿ ವೈರಸ್ ಸೋಂಕನ್ನು ಮಗುವಿಗೆ ತಗಲಿಸುವಂಥ ಅಥವಾ ಮಗುವಿಗೆ ಯಾವುದೇ ಮಾರಣಾಂತಿಕ ಕಾಯಿಲೆಯನ್ನು ಉಂಟು ಮಾಡುವಂಥ ಅಥವಾ ಯಾವುದೇ ಸೋಂಕನ್ನು ಅಂಟಿಸುವಂಥ; ಅಥವಾ

– ಸಾಮೂಹಿಕ ಲೈಂಗಿಕ ಅತ್ಯಾಚಾರ ಎಸಗಿದರೆ

(ಕೆ) ಮಗುವಿನ ಮಾನಸಿಕ ಅಥವಾ ದೈಹಿಕ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು, ಮಗುವಿನ ಮೇಲೆ ಯಾರಾದರೂ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಎಲ್) ಯಾರಾದರೂ ಒಂದಕ್ಕಿಂತ ಹೆಚ್ಚು ಸಲ ಅಥವಾ ಪದೇಪದೇ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಎಂ) ಯಾರಾದರೂ ಹನ್ನೆರಡು ವರ್ಷಗಳಿಗಿಂತ ಕಡಿಮೆ ವಯೋಮಾನದ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಎನ್) ರಕ್ತ ಸಂಬಂಧದಿಂದಾಗಿ ಅಥವಾ ದತ್ತಕದ ಮೂಲಕ ಅಥವಾ ವಿವಾಹದಿಂದಾಗಿ ಅಥವಾ ಪೋಷಕತ್ವದಿಂದಾಗಿ ಅಥವಾ ಪಾಲಕತ್ವದಿಂದಾಗಿ ಅಥವಾ ಮಗುವಿನ ಪಾಲನೆ, ಪೋಷಣೆಯನ್ನು ನೋಡಿಕೊಳ್ಳುತ್ತಿರುವ ಕಾರಣದಿಂದಾಗಿ ಮಗುವಿನ ಸಂಬಂಧಿಯಾಗಿರುವ ಅಥವಾ ಮಗುವಿನ ತಂದೆ ತಾಯಿಯೊಂದಿಗೆ ಕೌಟುಂಬಿಕ ಸಂಬಂಧವನ್ನು ಹೊಂದಿರುವ ಅಥವಾ ಮಗುವಿನೊಂದಿಗೆ ಅದೇ ವಾಸದ ಮನೆಯಲ್ಲಿ ಅಥವಾ ಕೂಡು ಕುಟುಂಬದ ವಾಸದ ಮನೆಯಲ್ಲಿ ವಾಸಿಸುತ್ತಿರುವ ಯಾರಾದರೂ ಅಂಥ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಒ) ಮಗುವಿಗೆ ಸೇವೆಯನ್ನು ಒದಗಿಸುತ್ತಿರುವ ಯಾವುದೇ ಸಂಸ್ಥೆಯ ಒಡೆತನದಲ್ಲಿರುವ ಅಥವಾ ಆಡಳಿತ ಮಂಡಳಿಯಲ್ಲಿರುವ, ಅಥವಾ ಸಿಬ್ಬಂದಿಯಾಗಿರುವ ಯಾರಾದರೂ ಅಂಥ ಸಂಸ್ಥೆಯಲ್ಲಿ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಪಿ) ಮಗುವಿನ ವಿಶ್ವಾಸಕ್ಕೆ ಪಾತ್ರವಾಗಿರುವ ಅಥವಾ ಮಗುವಿನ ಮೇಲೆ ಅಧಿಕಾರ ಹೊಂದಿರುವ ಯಾರಾದರೂ ಒಂದು ಸಂಸ್ಥೆಯಲ್ಲಿ ಅಥವಾ ಮಗುವಿನ ಮನೆಯಲ್ಲಿ ಅಥವಾ ಯಾವುದೇ ಇತರ ಜಾಗದಲ್ಲಿ, ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಕ್ಯೂ) ಮಗುವು ಗರ್ಭಿಣಿ ಎನ್ನುವುದು ಗೊತ್ತಿದ್ದು, ಆ ಮಗುವಿನ ಮೇಲೆ ಯಾರಾದರೂ, ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಆರ್) ಯಾರಾದರೂ, ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿ, ಆ ಮಗುವನ್ನು ಹತ್ಯೆ ಮಾಡಲು ಪ್ರಯತ್ನಿಸಿದರೆ; ಅಥವಾ

(ಎಸ್) ಯಾರಾದರೂ, ಕೋಮುಗಲಭೆಯ ಅಥವಾ ಮತೀಯ ಹಿಂಸಾಚಾರದ ಸಮಯದಲ್ಲಿ ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ; ಅಥವಾ

(ಟಿ) ಯಾರಾದರೂ, ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಎಸಗಿದ್ದಕ್ಕಾಗಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಲೈಂಗಿಕ ಅಪರಾಧಕ್ಕಾಗಿ ಈ ಹಿಂದೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ;

(ಯು) ಯಾರಾದರೂ, ಮಗುವಿನ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದರೆ ಮತ್ತು ಆ ಮಗುವನ್ನು ವಿವಸ್ತ್ರಗೊಳಿಸಿದರೆ ಅಥವಾ ಸಾರ್ವಜನಿಕವಾಗಿ ಬೆತ್ತಲೆ ಮೆರವಣಿಗೆ ಮಾಡಿದರೆ

– ಅವನು ತೀವ್ರತರ ಲೈಂಗಿಕ ಅತ್ಯಾಚಾರ ಎಸಗಿದ್ದಾನೆಂದು ಹೇಳಲಾಗುತ್ತದೆ.

**10. ತೀವ್ರತರ ಲೈಂಗಿಕ ಅತ್ಯಾಚಾರ ಎಸಗಿದಕ್ಕಾಗಿ ಶಿಕ್ಷೆ.–** ಯಾರಾದರೂ ತೀವ್ರತರ ಲೈಂಗಿಕ ಅತ್ಯಾಚಾರ ಎಸಗಿದರೆ, ಅವನು, ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**ಇ. ಲೈಂಗಿಕ ಕಿರುಕುಳ ಮತ್ತು ಅದಕ್ಕಾಗಿ ಶಿಕ್ಷೆ**

**11. ಲೈಂಗಿಕ ಕಿರುಕುಳ.–** ಯಾರೇ ವ್ಯಕ್ತಿಯು,–

(i) ಪದವನ್ನು ಅಥವಾ ಧ್ವನಿಯನ್ನು ಮಗುವು ಕೇಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅಂಥ ಯಾವುದೇ ಪದವನ್ನು ಅವನು ಉಚ್ಚರಿಸಿದರೆ ಅಥವಾ ಯಾವುದೇ ಧ್ವನಿಯನ್ನು ಮಾಡಿದರೆ ಅಥವಾ ಮಾಡುವ ಅಂಗ ಸನ್ನೆಯನ್ನು ಅಥವಾ ತೋರಿಸುವ ವಸ್ತುವನ್ನು ಅಥವಾ ದೇಹದ ಭಾಗವನ್ನು ಮಗವು ನೋಡಬೇಕೆಂಬ ಉದ್ದೇಶದಿಂದ

ಅಂಥ ಸನ್ನೆಯನ್ನು ಮಾಡಿದರೆ ಅಥವಾ ಯಾವುದೇ ಅಂಥ ವಸ್ತುವನ್ನು ಅಥವಾ ದೇಹದ ಯಾವುದೇ ಭಾಗವನ್ನು ತೋರಿಸಿದರೆ; ಅಥವಾ

(ii) ಮಗುವಿನ ದೇಹವನ್ನು ಅಥವಾ ಅದರ ದೇಹದ ಯಾವುದೇ ಭಾಗವನ್ನು ಅಂಥ ವ್ಯಕ್ತಿಯು ಅಥವಾ ಯಾರೇ ಇತರ ವ್ಯಕ್ತಿಯು ನೋಡುವ ಹಾಗೆ ಮಗುವು ತನ್ನ ದೇಹವನ್ನು ಅಥವಾ ದೇಹದ ಯಾವುದೇ ಭಾಗವನ್ನು ತೋರಿಸುವಂತೆ ಮಾಡಿದರೆ; ಅಥವಾ

(iii) ಕಾಮಪ್ರಚೋದಕ ಉದ್ದೇಶಕ್ಕಾಗಿ ಯಾವುದೇ ರೂಪದಲ್ಲಿ ಅಥವಾ ಮಾಧ್ಯಮದ ಮೂಲಕ ಮಗುವಿಗೆ ಯಾವುದೇ ವಸ್ತುವನ್ನು ತೋರಿಸಿದರೆ; ಅಥವಾ

(iv) ಅವನು ಮಗುವನ್ನು ಪದೇಪದೇ ಅಥವಾ ಸತತವಾಗಿ ಹಿಂಬಾಲಿಸಿದರೆ ಅಥವಾ ಪ್ರತ್ಯಕ್ಷವಾಗಿಯಾಗಲಿ ಅಥವಾ ಎಲೆಕ್ಟ್ರಾನಿಕ್‌ನ, ಡಿಜಿಟಲ್‌ನ ಅಥವಾ ಯಾವುದೇ ಇತರ ಮಾಧ್ಯಮದ ಮೂಲಕವಾಗಿಯಾಗಲಿ ಮಗುವನ್ನು ಗಮನಿಸುತ್ತಿದ್ದರೆ ಅಥವಾ ಸಂಪರ್ಕಿಸುತ್ತಿದ್ದರೆ; ಅಥವಾ

(v) ಅವನು ಮಗುವಿನ ದೇಹದ ಯಾವುದೇ ಭಾಗವನ್ನು ಅಥವಾ ಲೈಂಗಿಕ ಕೃತ್ಯದಲ್ಲಿ ಮಗುವನ್ನು ತೊಡಗಿಸಿಕೊಂಡಿರುವುದನ್ನು ಎಲೆಕ್ಟ್ರಾನಿಕ್‌ನ, ಫಿಲಂನ ಅಥವಾ ಡಿಜಿಟಲ್‌ನ ಅಥವಾ ಯಾವುದೇ ಇತರ ವಿಧಾನದ ಮೂಲಕ ನೈಜವಾದ ಅಥವಾ ಸೃಷ್ಟನೆ ಮಾಡಿದ ನಿರೂಪಣೆಯನ್ನು, ಯಾವುದೇ ರೂಪದ ಮಾಧ್ಯಮದಲ್ಲಿ ಬಳಸಿಕೊಳ್ಳುವುದಾಗಿ ಮಗುವನ್ನು ಹೆದರಿಸಿದರೆ; ಅಥವಾ

(vi) ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಪ್ರಲೋಭನಗೊಳಿಸಿದರೆ ಅಥವಾ ಅದಕ್ಕೆ ಪ್ರತಿಫಲವಾಗಿ ಹಣ ನೀಡುವ ಆಮಿಷ ತೋರಿಸಿದರೆ

– ಅಂಥ ವ್ಯಕ್ತಿಯು ಮಗುವಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆಂದು ಹೇಳಲಾಗುತ್ತದೆ.

**ವಿವರಣೆ:** "ಲೈಂಗಿಕ ಉದ್ದೇಶ" ವನ್ನು ಒಳಗೊಂಡಿರುವ ಯಾವುದೇ ಪ್ರಶ್ನೆಯು ಸಂಗತಿಯ ಪ್ರಶ್ನೆಯಾಗಿರತಕ್ಕದ್ದು.

**12. ಲೈಂಗಿಕ ಕಿರುಕುಳ ನೀಡಿದಕ್ಕಾಗಿ ಶಿಕ್ಷೆ.**– ಯಾರಾದರೂ, ಮಗುವಿಗೆ ಲೈಂಗಿಕ ಕಿರುಕುಳ ನೀಡಿದರೆ ಅವನು, ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಎರಡರಲ್ಲೊಂದು ಬಗೆಯ, ಕಾರವಾಸ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

## ಅಧ್ಯಾಯ –III

## ಕಾಮಪ್ರಚೋದಕ ಉದ್ದೇಶಕ್ಕಾಗಿ ಮಗುವನ್ನು ಬಳಸಿಕೊಳ್ಳುವುದು ಮತ್ತು ಅದಕ್ಕಾಗಿ ಶಿಕ್ಷೆ

**13. ಕಾಮ ಪ್ರಚೋದಕ ಉದ್ದೇಶಕ್ಕಾಗಿ ಮಗುವನ್ನು ಬಳಸಿಕೊಳ್ಳುವುದು.**– ಯಾರಾದರೂ,

(ಎ) ಮಗುವಿನ ಗುಪ್ತಾಂಗಗಳನ್ನು ಚಿತ್ರಿಸುವುದು;

(ಬಿ) ನಿಜವಾಗಿ ಅಥವಾ ತೋರಿಕೆಗಾಗಿ (ಅಂಗಭೇದನ ಸಹಿತ ಅಥವಾ ಅಂಗಭೇದನ ರಹಿತ) ಲೈಂಗಿಕ ಕೃತ್ಯಗಳಲ್ಲಿ ತೊಡಗಿಸಿಕೊಂಡಿರುವ ಮಗುವನ್ನು ಬಳಕೆ ಮಾಡಿಕೊಳ್ಳುವುದು;

(ಸಿ) ಮಗುವನ್ನು ಅಸಭ್ಯವಾಗಿ ಅಥವಾ ಅಶ್ಲೀಲವಾಗಿ ಚಿತ್ರಿಸುವುದು

– ಸೇರಿದಂತೆ ಲೈಂಗಿಕ ತೃಪ್ತಿಯ ಉದ್ದೇಶಕ್ಕಾಗಿ ಮಗುವನ್ನು ಯಾವುದೇ ರೂಪದ ಮಾಧ್ಯಮದಲ್ಲಿ (ದೂರದರ್ಶನ ವಾಹಿನಿಗಳಲ್ಲಿ ಅಥವಾ ಅಂತರ್ಜಾಲದಲ್ಲಿ ಅಥವಾ ಯಾವುದೇ ಇತರ ಎಲೆಕ್ಟ್ರಾನಿಕ್ ರೂಪದಲ್ಲಿ ಅಥವಾ ಮುದ್ರಿತ ರೂಪದಲ್ಲಿ ಬಿತ್ತರಿಸಿದ ಕಾರ್ಯಕ್ರಮ ಅಥವಾ ಜಾಹೀರಾತು ವೈಯಕ್ತಿಕವಾಗಿ ಬಳಕೆಗಾಗಿ ಉದ್ದೇಶಿಸಿದ್ದಾಗಿರಲಿ ಅಥವಾ ವಿತರಣೆಯ ಉದ್ದೇಶಿಸಿದ್ದಾಗಿರಲಿ ಅಥವಾ ಉದ್ದೇಶಿಸಿದ್ದಲ್ಲದಿರಲಿ ಆ ಕಾರ್ಯಕ್ರಮ ಅಥವಾ ಜಾಹೀರಾತು ಒಳಗೊಂಡಂತೆ) ಬಳಸಿಕೊಂಡರೆ ಅವನು ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಬಳಸಿಕೊಂಡಿರುವ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಗಳಿಗಾಗಿ, "ಮಗುವಿನ ಬಳಕೆ" ಪದಾವಳಿಯು, ಕಾಮಪ್ರಚೋದಕ ಸಾಮಗ್ರಿಯನ್ನು ತಯಾರಿಸುವುದಕ್ಕಾಗಿ, ಉತ್ಪಾದಿಸುವುದಕ್ಕಾಗಿ, ಪ್ರಸ್ತುತಪಡಿಸುವುದಕ್ಕಾಗಿ, ಪ್ರಸರಣ ಮಾಡುವುದಕ್ಕಾಗಿ, ಪ್ರಕಟಿಸುವುದಕ್ಕಾಗಿ ಅಂಥ ಸಾಮಗ್ರಿಗೆ ಅನುಕೂಲ ಕಲ್ಪಿಸಿಕೊಡುವುದಕ್ಕಾಗಿ ಮತ್ತು ಅದರ ವಿತರಣೆಗಾಗಿ ಮುದ್ರಣದಂಥ, ಎಲೆಕ್ಟ್ರಾನಿಕ್‌ನಂಥ, ಕಂಪ್ಯೂಟರ್‌ನಂಥ ಯಾವುದೇ ಮಾಧ್ಯಮದ ಮೂಲಕ ಅಥವಾ ಯಾವುದೇ ಇತರ ತಂತ್ರಜ್ಞಾನದ ಮೂಲಕ ಮಗುವನ್ನು ತೊಡಗಿಸುವುದು ಒಳಗೊಳ್ಳತಕ್ಕದ್ದು.

**14. ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಬಳಸಿಕೊಳ್ಳುವುದಕ್ಕಾಗಿ ಶಿಕ್ಷೆ.**– (1) ಯಾರಾದರೂ ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಅಥವಾ ಮಕ್ಕಳನ್ನು ಬಳಕೆ ಮಾಡಿದರೆ ಅವನು, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ, ಎರಡರಲ್ಲೊಂದು ಬಗೆಯ ಕಾರಾವಾಸ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಹಾಗೂ ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ, ಎರಡರಲ್ಲೊಂದು ಬಗೆಯ ಕಾರಾವಾಸ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಬಳಕೆ ಮಾಡುವ ವ್ಯಕ್ತಿಯು ಕಾಮಪ್ರಚೋದಕ ಕೃತ್ಯಗಳಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿ, 3ನೇ ಪ್ರಕರಣದಲ್ಲಿ ಹೇಳಿರುವ ಅಪರಾಧವನ್ನು ಮಾಡಿದರೆ ಅವನು, ಹತ್ತು ವರ್ಷಗಳಿಗಿಂತ ಕಡಿಮೆಯಲ್ಲದ

ಆದರೆ ಜೀವಾವಧಿ ಶಿಕ್ಷೆಯವರೆಗೆ ವಿಸ್ತರಿಸಬಹುದಾದ, ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಬಳಕೆ ಮಾಡುವ ವ್ಯಕ್ತಿಯು ಕಾಮಪ್ರಚೋದಕ ಕೃತ್ಯಗಳಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿ, 5ನೇ ಪ್ರಕರಣದಲ್ಲಿ ಹೇಳಿರುವ ಅಪರಾಧವನ್ನು ಮಾಡಿದರೆ, ಅವನು, ಜೀವಾವಧಿ ಕಠಿಣ ಕಾರಾವಾಸದ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಬಳಕೆ ಮಾಡುವ ವ್ಯಕ್ತಿಯು, ಕಾಮ ಪ್ರಚೋದಕ ಕೃತ್ಯಗಳಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿ, 7ನೇ ಪ್ರಕರಣದಲ್ಲಿ ಹೇಳಿರುವ ಅಪರಾಧವನ್ನು ಮಾಡಿದರೆ, ಅವನು, ಆರು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಎಂಟು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ, ಎರಡರಲ್ಲೊಂದು ಬಗೆಯ ಕಾರಾವಾಸದ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5) ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಬಳಕೆ ಮಾಡುವ ವ್ಯಕ್ತಿಯು, ಕಾಮ ಪ್ರಚೋದಕ ಕೃತ್ಯಗಳಲ್ಲಿ ನೇರವಾಗಿ ಭಾಗಿಯಾಗಿ, 9ನೇ ಪ್ರಕರಣದಲ್ಲಿ ಹೇಳಿರುವ ಅಪರಾಧವನ್ನು ಮಾಡಿದರೆ, ಅವನು, ಎಂಟು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಹತ್ತು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ, ಎರಡರಲ್ಲೊಂದು ಬಗೆಯ ಕಾರಾವಾಸದ ಶಿಕ್ಷೆಗೆ ಒಳಗಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**15. ಮಗುವನ್ನು ಒಳಗೊಂಡಿರುವ ಕಾಮ ಪ್ರಚೋದಕ ಸಾಮಗ್ರಿಯ ಸಂಗ್ರಹಣೆಗಾಗಿ ಶಿಕ್ಷೆ.**–ಯಾವುದೇ ರೂಪದಲ್ಲಿ ಮಗುವನ್ನು ಒಳಗೊಂಡಿರುವ ಯಾವುದೇ ಕಾಮಪ್ರಚೋದಕ ಸಾಮಗ್ರಿಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಸಂಗ್ರಹಿಸಿರುವ ಯಾರೇ ವ್ಯಕ್ತಿಯು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಗೆ ಅಥವಾ ಆ ಶಿಕ್ಷೆಯ ಸಹಿತ ಜುಲ್ಮಾನೆಗೆ ಅಥವಾ ಅವೆರಡೂ ಶಿಕ್ಷೆಗೆ ಎಂದರೆ, ಎರಡರಲ್ಲೊಂದು ಬಗೆಯ ಶಿಕ್ಷೆಗೆ ಗುರಿಯಾಗತಕ್ಕದ್ದು.

## ಅಧ್ಯಾಯ –IV

## ಅಪರಾಧಕ್ಕೆ ದುಷ್ಪ್ರೇರಣೆ ಮತ್ತು ಅಪರಾಧವನ್ನು ಎಸಗಲು ಪ್ರಯತ್ನಿಸುವುದು

**16. ಅಪರಾಧಕ್ಕೆ ದುಷ್ಪ್ರೇರಣೆ.**– ಯಾರೇ ವ್ಯಕ್ತಿಯು,–

**ಮೊದಲನೆಯದಾಗಿ.**– ಆ ಅಪರಾಧವನ್ನು ಮಾಡುವಂತೆ ಯಾರೇ ವ್ಯಕ್ತಿಗೆ ಪ್ರಚೋದನೆ ಮಾಡಿದರೆ; ಅಥವಾ

**ಎರಡನೆಯದಾಗಿ.**–ಅಪರಾಧವನ್ನು ಮಾಡಲು ಯಾವುದೇ ಒಳಸಂಚಿನಲ್ಲಿ, ಆ ಒಳಸಂಚಿಗೆ ಅನುಸಾರವಾಗಿ ಮತ್ತು ಆ ಅಪರಾಧವನ್ನು ಮಾಡುವ ಯಾವುದೇ ಕೃತ್ಯವು ಅಥವಾ ಕಾನೂನುಬಾಹಿರ ಲೋಪವು ಉಂಟಾಗಿದ್ದಾಗ, ಅಂಥ ಒಳಸಂಚಿನಲ್ಲಿ ಒಬ್ಬನನ್ನು ಅಥವಾ ಇತರ ಹೆಚ್ಚು ವ್ಯಕ್ತಿಗಳನ್ನು ತೊಡಗಿಸಿಕೊಂಡಿದ್ದರೆ; ಅಥವಾ

**ಮೂರನೆಯದಾಗಿ.**– ಅಪರಾಧವನ್ನು ಮಾಡುವುದಕ್ಕಾಗಿ ಯಾವುದೇ ಕೃತ್ಯದಿಂದ ಅಥವಾ ಕಾನೂನುಬಾಹಿರ ಲೋಪ ಮಾಡಿ ಉದ್ದೇಶಪೂರ್ವಕವಾಗಿ ನೆರವು ನೀಡಿದ್ದರೆ

– ಆ ವ್ಯಕ್ತಿಯು ಅಂಥ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ್ದಾನೆ ಎಂದಾಗುತ್ತದೆ.

**ವಿವರಣೆ** I.– ಯಾವ ಮಹತ್ವದ ಸಂಗತಿಯನ್ನು, ಯಾವ ವ್ಯಕ್ತಿಯು ತಿಳಿಸಲೇಬೇಕಾಗಿತ್ತೋ ಆ ಮಹತ್ವದ ಸಂಗತಿಯನ್ನು ಆ ವ್ಯಕ್ತಿಯು ಉದ್ದೇಶಪೂರ್ವಕವಾಗಿ ತಪ್ಪಾಗಿ ನಿರೂಪಣೆ ಮಾಡಿ ಅಥವಾ ಉದ್ದೇಶಪೂರ್ವಕವಾಗಿ ಬಚ್ಚಿಟ್ಟು ತಾನೇ ಸ್ವಯಂ, ಒಂದು ಕಾರ್ಯವು ಆಗುವಂತೆ ಮಾಡಿಸಿದರೆ ಅಥವಾ ಒಂದು ಕಾರ್ಯ ಆಗುವಂತೆ ಮಾಡಿದರೆ ಅಥವಾ ಒಂದು ಕಾರ್ಯ ಮಾಡಿಸಲು ಅಥವಾ ಒಂದು ಕಾರ್ಯವು ಆಗುವಂತೆ ಮಾಡಲು ಪ್ರಯತ್ನಿಸಿದರೆ ಅಂಥ ಅಪರಾಧ ಮಾಡುವುದಕ್ಕೆ ಅವನು ಪ್ರಚೋದನೆ ಮಾಡಿದ್ದಾನೆಂದು ಹೇಳಲಾಗುತ್ತದೆ.

**ವಿವರಣೆ** II.– ಯಾರಾದರೂ, ಒಂದು ಕೃತ್ಯವನ್ನು ಎಸಗುವುದಕ್ಕೆ ಮುಂಚೆಯಾಗಲಿ ಅಥವಾ ಆ ಕೃತ್ಯವನ್ನು ಮಾಡುವ ಸಮಯದಲ್ಲಾಗಲೀ ಆ ಕೃತ್ಯವನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಏನನ್ನಾದರೂ ಮಾಡಿದ್ದರೆ ಮತ್ತು ಹಾಗೆ ಮಾಡಿ ಆ ಕೃತ್ಯವನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದರೆ ಆ ಕೃತ್ಯವನ್ನು ಮಾಡಲು ಅವನು ನೆರವಾಗಿದ್ದಾನೆಂದು ಹೇಳಲಾಗುತ್ತದೆ.

**ವಿವರಣೆ** III.– ಯಾರಾದರೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಎಸಗುವ ಉದ್ದೇಶಕ್ಕಾಗಿ, ಬೆದರಿಸಿ ಅಥವಾ ಬಲ ಪ್ರಯೋಗ ಮಾಡಿ ಅಥವಾ ಬಲತ್ಕಾರದ, ಅಪಹರಣದ, ಮೋಸದ, ವಂಚನೆಯ, ಅಧಿಕಾರದ ಅಥವಾ ಸ್ಥಾನದ ದುರುಪಯೋಗದ, ಮನಸ್ಸನ್ನು ನೋಯಿಸುವ ಇತರ ವಿಧಾನಗಳಿಂದ ಅಥವಾ ಇನ್ನೊಬ್ಬ ವ್ಯಕ್ತಿಯ ಮೇಲೆ ನಿಯಂತ್ರಣ ಇಟ್ಟುಕೊಂಡಿರುವ ವ್ಯಕ್ತಿಯ ಸಮ್ಮತಿಯನ್ನು ಪಡೆಯಲು ಹಣವನ್ನು ಅಥವಾ ಸೌಲಭ್ಯಗಳನ್ನು ನೀಡಿ ಅಥವಾ ಸ್ವೀಕರಿಸಿ ಮಗುವನ್ನು ತೊಡಗಿಸಿದ್ದರೆ ಅಥವಾ ಮಗುವನ್ನು ಇಟ್ಟುಕೊಂಡಿದ್ದರೆ, ಪಡೆದುಕೊಂಡಿದ್ದರೆ ಅಥವಾ ಸಾಗಣೆ ಮಾಡಿದ್ದರೆ ಆ ಕೃತ್ಯವನ್ನು ಮಾಡುವುದಕ್ಕೆ ಅವನು ನೆರವು ನೀಡಿದ್ದಾನೆಂದು ಹೇಳಲಾಗುತ್ತದೆ.

**17. ದುಷ್ಪ್ರೇರಣೆಗಾಗಿ ಶಿಕ್ಷೆ.**– ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ ಯಾರಾದರೂ, ಯಾವ ಕೃತ್ಯವನ್ನು ಮಾಡಲು ದುಷ್ಪ್ರೇರಣೆ ಮಾಡಲಾಗಿದೆಯೋ, ಆ ದುಷ್ಪ್ರೇರಣೆಯ ಪರಿಣಾಮವಾಗಿ ಆ ಕೃತ್ಯವನ್ನು ಎಸಗಿದ್ದರೆ ಅವನು ಆ ಅಪರಾಧಕ್ಕಾಗಿ ಉಪಬಂಧಿಸಿದ ಶಿಕ್ಷೆಗೆ ಗುರಿಯಾಗತಕ್ಕದ್ದು.

ವಿವರಣೆ.– ಯಾವ ಕೃತ್ಯವನ್ನು ಅಥವಾ ಅಪರಾಧವನ್ನು ಎಸಗಲಾಗಿದೆಯೋ ಅಥವಾ ಯಾವ ಒಳಸಂಚನ್ನು ಅಥವಾ ನೆರವನ್ನು ದುಷ್ಪ್ರೇರಣೆ ಎಂದು ಹೇಳಲಾಗುತ್ತದೋ ಆ ಒಳಸಂಚಿಗೆ ಅಥವಾ ನೆರವಿಗೆ ಅನುಸಾರವಾಗಿ ಎಸಗಿದ್ದಾಗ ಆ ಕೃತ್ಯವನ್ನು ಅಥವಾ ಅಪರಾಧವನ್ನು ದುಷ್ಪ್ರೇರಣೆಯ ಪರಿಣಾಮವಾಗಿ ಎಸಗಲಾಗಿದೆಯೆಂದು ಹೇಳಲಾಗುತ್ತದೆ.

**18. ಅಪರಾಧವನ್ನು ಮಾಡಲು ಪ್ರಯತ್ನಿಸಿದ್ದಕ್ಕಾಗಿ ಶಿಕ್ಷೆ.**– ಯಾರಾದರೂ ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧವನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಅಂಥ ಅಪರಾಧವನ್ನು ಮಾಡಿಸಿದರೆ, ಮತ್ತು ಅಂಥ ಪ್ರಯತ್ನದಲ್ಲಿ ಅಪರಾಧವನ್ನು ಮಾಡುವುದಕ್ಕಾಗಿ ಅಂಥ ಪ್ರಯತ್ನದಲ್ಲಿ ಯಾವುದೇ ಕೃತ್ಯವನ್ನು ಎಸಗಿದರೆ ಅವನು ಆ ಅಪರಾಧಕ್ಕಾಗಿ ಉಪಬಂಧಿಸಿರುವ ಸಂದರ್ಭಾನುಸಾರ ಅವನ ಜೀವಿತಾವಧಿಯ ಅರ್ಧದಷ್ಟರವರೆಗೆ ವಿಸ್ತರಿಸಬಹುದಾದ ಎರಡರಲ್ಲೊಂದು ಬಗೆಯ ಕಾರಾವಾಸದ ಶಿಕ್ಷೆಗೆ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ದೀರ್ಘಾವಧಿಯ ಕಾರವಾಸದ ಶಿಕ್ಷೆಯಲ್ಲಿ ಅರ್ಧದಷ್ಟರವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಗೆ ಅಥವಾ ಜುಲ್ಮಾನೆಗೆ ಅಥವಾ ಅವೆರಡೂ ಶಿಕ್ಷೆಗೆ ಒಳಗಾಗತಕ್ಕದ್ದು.

## ಅಧ್ಯಾಯ –V

## ಮೊಕದ್ದಮೆಗಳನ್ನು ವರದಿ ಮಾಡಲು ಕಾರ್ಯವಿಧಾನ

**19. ಅಪರಾಧಗಳನ್ನು ವರದಿ ಮಾಡುವುದು.**– (1) ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವು ಆಗುವ ಸಂಭವ ಇದೆ ಎಂದು ಅನುಮಾನ ಪಡುವ ಅಥವಾ ಅಂಥ ಅಪರಾಧವು ಆಗಿರುವುದು ಗಮನಕ್ಕೆ ಬಂದಿರುವ ಯಾರೇ ವ್ಯಕ್ತಿಯು (ಮಗುವೂ ಸೇರಿದಂತೆ),–

(ಎ) ಬಾಲ ನ್ಯಾಯ ವಿಶೇಷ ಪೊಲೀಸ್ ಘಟಕಕ್ಕೆ; ಅಥವಾ

(ಬಿ) ಸ್ಥಳೀಯ ಪೊಲೀಸರಿಗೆ

– ಅಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(2) ಉಪ–ಪ್ರಕರಣ (1)ರ ಮೇರೆಗೆ ನೀಡಿದ,–

(ಎ) ಪ್ರತಿಯೊಂದು ವರದಿಗೆ ನೋಂದಣಿ ಸಂಖ್ಯೆ ಕೊಡತಕ್ಕದ್ದು ಮತ್ತು ಅದನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(ಬಿ) ಆ ಪ್ರತಿಯೊಂದು ವರದಿಯನ್ನು ಮಾಹಿತಿದಾರನಿಗೆ ಓದಿ ಹೇಳತಕ್ಕದ್ದು.

(ಸಿ) ಪೊಲೀಸ್ ಘಟಕದಲ್ಲಿ ಇಡಬೇಕಾದ ಪುಸ್ತಕದಲ್ಲಿ ಆ ಪ್ರತಿಯೊಂದು ವರದಿಯನ್ನು ನಮೂದು ಮಾಡತಕ್ಕದ್ದು.

(3) ಉಪ–ಪ್ರಕರಣ (1)ರ ಮೇರೆಗಿನ ವರದಿಯನ್ನು ಮಗುವು ಕೊಟ್ಟಿದ್ದರೆ ಆ ವರದಿಯಲ್ಲಿ ದಾಖಲಾಗಿರುವ ಒಳಾಂಶಗಳು ಮಗುವಿಗೆ ಅರ್ಥವಾಗುವ ಹಾಗೆ ಆ ವರದಿಯನ್ನು (2)ನೇ ಉಪ–ಪ್ರಕರಣದ ಮೇರೆಗೆ ಸರಳ ಭಾಷೆಯಲ್ಲಿ ದಾಖಲಿಸತಕ್ಕದ್ದು.

(4) ದಾಖಲು ಮಾಡುತ್ತಿರುವ ಒಳಾಂಶಗಳು ಮಗುವಿಗೆ ಅರ್ಥವಾಗದಿದ್ದ ಸಂದರ್ಭದಲ್ಲಿ ಅಥವಾ ಅವುಗಳನ್ನು ಅರ್ಥಮಾಡಿಕೊಳ್ಳಲು ಮಗುವಿಗೆ ಆಗಿರದಿದ್ದ ಸಂದರ್ಭದಲ್ಲಿ ನಿಯಮಿಸಬಹುದಾದಂಥ ಅರ್ಹತೆಗಳನ್ನು, ಅನುಭವವನ್ನು ಹೊಂದಿರುವ ಭಾಷಾಂತರಕಾರರನ್ನು ಅಥವಾ ದುಭಾಷಿಯನ್ನು ಆ ಮಗುವಿಗೆ ಒದಗಿಸುವುದು ಅವಶ್ಯಕವೆಂದು ಭಾವಿಸಿದಾಗಲೆಲ್ಲಾ ಅಂಥ ಭಾಷಾಂತರಕಾರರನ್ನು ಅಥವಾ ದುಭಾಷಿಯನ್ನು ಅಂಥ ಫೀಜಿನ ಸಂದಾಯದ ಆಧಾರ ಮೇಲೆ ಆ ಮಗುವಿಗೆ ಒದಗಿಸತಕ್ಕದ್ದು.

(5) ಯಾವ ಮಗುವಿನ ಮೇಲೆ ಅಪರಾಧವನ್ನು ಎಸಗಲಾಗಿದೆಯೋ ಆ ಮಗುವಿಗೆ ಪಾಲನೆ ಪೋಷಣೆಯ ಮತ್ತು ರಕ್ಷಣೆಯ ಅವಶ್ಯಕತೆಯಿದೆಯೆಂದು ಬಾಲ ನ್ಯಾಯವಿಶೇಷ ಪೊಲೀಸ್ ಘಟಕಕ್ಕೆ ಅಥವಾ ಸ್ಥಳೀಯ ಪೊಲೀಸರಿಗೆ ಮನವರಿಕೆಯಾದರೆ, ಆಗ ಆ ಘಟಕವು ಅಥವಾ ಆ ಸ್ಥಳೀಯ ಪೊಲೀಸರು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ತರುವಾಯ, ಕೂಡಲೇ ಆ ವರದಿಯ ಇಪ್ಪತ್ತನಾಲ್ಕು ಗಂಟೆಗಳ ಅವಧಿಯೊಳಗೆ ಆಮಗುವಿಗೆ ಅಂಥ ಪಾಲನೆ ಪೋಷಣೆಯನ್ನು ಮತ್ತು ರಕ್ಷಣೆಯನ್ನು (ಮಗುವನ್ನು ಆಶ್ರಯ ಗೃಹಕ್ಕೆ ಅಥವಾ ಸಮೀಪದ ಆಸ್ಪತ್ರೆಗೆ ಸೇರಿಸುವುದೂ ಸೇರಿದಂತೆ) ನೀಡಲು ನಿಯಮಿಸಬಹುದಾದಂಥ ವ್ಯವಸ್ಥೆಯನ್ನು ಮಾಡತಕ್ಕದ್ದು.

(6) ಬಾಲನ್ಯಾಯ ವಿಶೇಷ ಪೊಲೀಸ್ ಘಟಕವು ಅಥವಾ ಸ್ಥಳೀಯ ಪೊಲೀಸರು ಯಾವುದೇ ಅನಗತ್ಯ ವಿಳಂಬ ಮಾಡದೆ ಆದರೆ, ಇಪ್ಪತ್ತನಾಲ್ಕು ಗಂಟೆಗಳ ಅವಧಿಯೊಳಗೆ ವಿಷಯವನ್ನು ಮಕ್ಕಳ ಕಲ್ಯಾಣ ಸಮಿತಿಗೆ ಮತ್ತು ವಿಶೇಷ ನ್ಯಾಯಾಲಯಕ್ಕೆ ಅಥವಾ ವಿಶೇಷ ನ್ಯಾಯಾಲಯವನ್ನು ಹೆಸರಿಸಿರದಿದ್ದರೆ ಸೆಷನ್ಸ್ ನ್ಯಾಯಾಲಯಕ್ಕೆ ಮಗುವಿನ ಪಾಲನೆ ಪೋಷಣೆಯ ಮತ್ತು ರಕ್ಷಣೆಯ ಅಗತ್ಯತೆ ಮತ್ತು ಈ ಸಂಬಂಧವಾಗಿ ಕೈಗೊಂಡಿರುವ ಕ್ರಮಗಳನ್ನೊಳಗೊಂಡಂತೆ ವರದಿ ಮಾಡತಕ್ಕದ್ದು.

(7) ಉಪ–ಪ್ರಕರಣ (1)ರ ಉದ್ದೇಶಕ್ಕಾಗಿ, ಸದ್ಭಾವನೆಯಿಂದ ಮಾಹಿತಿಯನ್ನು ನೀಡಿದಕ್ಕಾಗಿ ಯಾರೇ ವ್ಯಕ್ತಿಯು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಹೊಣೆಗಾರಿಕೆಗೆ ಒಳಗಾಗತಕ್ಕದ್ದಲ್ಲ.

**20. ಪ್ರಕರಣಗಳನ್ನು ವರದಿ ಮಾಡಲು ಮಾಧ್ಯಮ, ಸ್ಟುಡಿಯೋ ಮತ್ತು ಛಾಯಾಗ್ರಹಣ ಸೌಲಭ್ಯಗಳನ್ನು ಹೊಂದಿರುವವರ ಬಾಧ್ಯತೆ.**– ಯಾವುದೇ ಮಾಧ್ಯಮದ ಅಥವಾ ಹೋಟೆಲಿನ ಅಥವಾ ಲಾಡ್ಜ್‌ನ ಅಥವಾ ಆಸ್ಪತ್ರೆಯ ಅಥವಾ ಕ್ಲಬ್‌ನ ಅಥವಾ ಸ್ಟುಡಿಯೋದ ಅಥವಾ ಛಾಯಾಗ್ರಹಣ ಸೌಲಭ್ಯಗಳು ಎಲ್ಲಿ ಇರುವುವೋ ಅದನ್ನು ಯಾವುದೇ ಹೆಸರಿನಿಂದ ಕರೆದಿರಲಿ, ಅವುಗಳಲ್ಲಿ ನೇಮಕಗೊಂಡಿರುವ ವ್ಯಕ್ತಿಗಳ ಸಂಖ್ಯೆಯು ಎಷ್ಟೇ ಇರಲಿ ಅಲ್ಲಿನ ಯಾರೇ ಸಿಬ್ಬಂದಿಯು ಯಾವುದೇ ಮಾಧ್ಯಮವನ್ನು ಬಳಸಿಯಾವ ಸಾಮಗ್ರಿಯು ಅಥವಾ ವಸ್ತುವು ಮಗುವನ್ನು ಲೈಂಗಿಕವಾಗಿ ಶೋಷಣೆಗೆ ಒಳಪಡಿಸುವಂಥದ್ದಾಗಿದೆಯೋ, (ಕಾಮಪ್ರಚೋದಕವಾದದು, ಲೈಂಗಿಕತೆಗೆ ಸಂಬಂಧಿಸಿದುದು ಮಗುವನ್ನು ಅಥವಾ ಮಕ್ಕಳನ್ನು ಅಶ್ಲೀಲವಾಗಿ ನಿರೂಪಣೆ ಮಾಡಿರುವಂಥದ್ದು ಸೇರಿದಂತೆ) ಆ

ಯಾವುದೇ ಸಾಮಗ್ರಿಯು ಅಥವಾ ವಸ್ತುವು ತನ್ನ ಗಮನಕ್ಕೆ ಬಂದಾಗ ಅಂತಹ ಮಾಹಿತಿಯನ್ನು ಬಾಲನ್ಯಾಯ ವಿಶೇಷ ಪೊಲೀಸ್ ಘಟಕಕ್ಕೆ ಅಥವಾ ಸಂದರ್ಭಾನುಸಾರ ಸ್ಥಳೀಯ ಪೊಲೀಸರಿಗೆ ಒದಗಿಸತಕ್ಕದ್ದು.

21. **ಪ್ರಕರಣವನ್ನು ವರದಿ ಮಾಡಲು ಅಥವಾ ದಾಖಲಿಸಿಕೊಳ್ಳಲು ವಿಫಲವಾಗಿದ್ದಕ್ಕಾಗಿ ಶಿಕ್ಷೆ.-** (1) ಪ್ರಕರಣ 19ರ (1)ನೇ ಉಪ-ಪ್ರಕರಣದ ಅಥವಾ ಪ್ರಕರಣ 20ರ ಮೇರೆಗಿನ ಅಪರಾಧವನ್ನು ವರದಿ ಮಾಡಲು ವಿಫಲನಾದ ಅಥವಾ 19ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ಅಂಥ ಅಪರಾಧವನ್ನು ದಾಖಲಿಸಲು ವಿಫಲನಾದ ಯಾರೇ ವ್ಯಕ್ತಿಯು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಎರಡರಲ್ಲೊಂದು ಬಗೆಯ ಕಾರಾವಾಸದ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಒಳಗಾಗತಕ್ಕದ್ದು.

(2) ಯಾವುದೇ ಕಂಪನಿಯ ಅಥವಾ ಸಂಸ್ಥೆಯ (ಇದನ್ನು ಯಾವುದೇ ಹೆಸರಿನಿಂದ ಕರೆದಿರಲಿ) ಪ್ರಭಾರದಲ್ಲಿರುವ ಯಾರೇ ವ್ಯಕ್ತಿಯು, ತನ್ನ ನಿಯಂತ್ರಣದಲ್ಲಿರುವ ಅಧೀನ ಸಿಬ್ಬಂದಿಯಿಂದ 19ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ಅಪರಾಧ ಆಗಿರುವುದರ ವರದಿಯನ್ನು ಸಲ್ಲಿಸಲು ವಿಫಲನಾದರೆ ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದ ಮತ್ತು ಜುಲ್ಮಾನೆಯ ಶಿಕ್ಷೆಗೆ ಒಳಗಾಗತಕ್ಕದ್ದು.

(3) ಉಪ-ಪ್ರಕರಣ (1)ರ ಉಪಬಂಧಗಳು ಈ ಅಧಿನಿಯಮಕ್ಕೆ ಒಳಪಡುವ ಮಗುವಿಗೆ ಅನ್ವಯವಾಗತಕ್ಕದ್ದಲ್ಲ.

22. **ಸುಳ್ಳು ದೂರನ್ನು ಅಥವಾ ಸುಳ್ಳು ಮಾಹಿತಿಯನ್ನು ನೀಡಿದ್ದಕ್ಕಾಗಿ ಶಿಕ್ಷೆ.-** (1) 3ನೇ, 5ನೇ, 7ನೇ ಮತ್ತು 9ನೇ ಪ್ರಕರಣಗಳ ಮೇರೆಗಿನ ಅಪರಾಧವನ್ನು ಎಸಗಿದ್ದಕ್ಕೆ ಸಂಬಂಧಪಟ್ಟಂತೆ ಯಾರೇ ವ್ಯಕ್ತಿಯು, ಯಾರೇ ವ್ಯಕ್ತಿಯ ವಿರುದ್ಧ ಅವನನ್ನು ಅವಮಾನ ಮಾಡುವ, ಸುಲಿಗೆ ಮಾಡುವ ಅಥವಾ ಮಾನಹಾನಿ ಮಾಡುವ ಉದ್ದೇಶದಿಂದಲೇ ಸುಳ್ಳು ದೂರನ್ನು ನೀಡಿದರೆ ಅಥವಾ ಸುಳ್ಳು ಮಾಹಿತಿಯನ್ನು ಒದಗಿಸಿದರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಸಹ ಶಿಕ್ಷೆಗೆ ಒಳಗಾಗತಕ್ಕದ್ದು.

(2) ಮಗು ಸುಳ್ಳು ದೂರನ್ನು ನೀಡಿದರೆ ಅಥವಾ ಸುಳ್ಳು ಮಾಹಿತಿಯನ್ನು ಒದಗಿಸಿದರೆ ಅಂಥ ಮಗುವಿಗೆ ಯಾವುದೇ ಶಿಕ್ಷೆಯನ್ನು ವಿಧಿಸತಕ್ಕದ್ದಲ್ಲ.

(3) ಮಗು ಅಲ್ಲದ ಯಾರಾದರೂ, ಈ ಅಧಿನಿಯಮದ ಮೇರೆಗಿನ ಅಪರಾಧಗಳಲ್ಲಿ ಯಾವುದಕ್ಕಾದರೂ ಬಲಿಪಶುವನ್ನಾಗಿ ಮಾಡುವ ಸಲುವಾಗಿ ದೂರು ಸುಳ್ಳು ದೂರೆಂದು ಗೊತ್ತಿದ್ದು ಮಗುವಿನ ವಿರುದ್ಧ ಸುಳ್ಳು ದೂರನ್ನು ನೀಡಿದರೆ ಅಥವಾ ಸುಳ್ಳು ಮಾಹಿತಿಯನ್ನು ಒದಗಿಸಿದರೆ ಅವನು, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಸಹ ಶಿಕ್ಷೆಗೆ ಒಳಗಾಗತಕ್ಕದ್ದು.

23. **ಮಾಧ್ಯಮಕ್ಕೆ ಸಂಬಂಧಿಸಿದಂತೆ ಕಾರ್ಯವಿಧಾನ.-** (1) ಯಾರೇ ವ್ಯಕ್ತಿಯು, ಮಗುವಿನ ಗುಣ ಚಾರಿತ್ರ್ಯಕ್ಕೆ ಧಕ್ಕೆ ತರುವ ಅಥವಾ ಮಗುವಿನ ಏಕಾಂತತೆಗೆ ಭಂಗ ಉಂಟು ಮಾಡಬಹುದಾದಂಥ ಪರಿಣಾಮವುಳ್ಳ ಯಾವುದೇ ವರದಿಯನ್ನು ಅಥವಾ ಅಭಿಪ್ರಾಯಗಳನ್ನು ಅದರ ಬಗ್ಗೆ ಅಥವಾ ಅವುಗಳ ಬಗ್ಗೆ ಪರಿಪೂರ್ಣವಾದ ಹಾಗೂ ವಿಶ್ವಾಸಾರ್ಹವಾದ ಮಾಹಿತಿ ಇಲ್ಲದೆಯೇ ಯಾವುದೇ ಬಗೆಯ ಮಾಧ್ಯಮದಿಂದ ಅಥವಾ ಸ್ಟುಡಿಯೋದಿಂದ ಅಥವಾ ಛಾಯಾಚಿತ್ರ ಸೌಲಭ್ಯಗಳಿರುವ ಕಡೆಯಿಂದ ಮಗುವಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ ಅಂಥ ಯಾವುದೇ ವರದಿಯನ್ನು ಮಾಡತಕ್ಕದ್ದಲ್ಲ ಅಥವಾ ಅಭಿಪ್ರಾಯಗಳನ್ನು ಪ್ರಸ್ತುತಪಡಿಸತಕ್ಕದ್ದಲ್ಲ.

(2) ಯಾವುದೇ ಮಾಧ್ಯಮದಲ್ಲಿ ಮಗುವಿನ ಹೆಸರು, ವಿಳಾಸ, ಭಾವಚಿತ್ರ, ಕೌಟುಂಬಿಕ ವಿವರಗಳು, ಶಾಲೆ, ನೆರೆಹೊರೆ ಅಥವಾ ಮಗುವಿನ ಗುರುತನ್ನು ಬಹಿರಂಗಪಡಿಸಬಹುದಾದಂಥ ಯಾವುದೇ ಇತರ ವಿವರಗಳನ್ನೊಳಗೊಂಡ ಯಾವ ವರದಿಗಳನ್ನು ಬಹಿರಂಗಪಡಿಸತಕ್ಕದ್ದಲ್ಲ:

ಪರಂತು, ಹಾಗೆ ಬಹಿರಂಗಪಡಿಸುವುದು ಮಗುವಿನ ಹಿತಾಸಕ್ತಿಗೆ ಅನುಗುಣವಾದುದಾಗಿದೆ ಎಂದು ಈ ಅಧಿನಿಯಮದ ಮೇರೆಗಿನ ಪ್ರಕರಣವನ್ನು ಅಧಿವಿಚಾರಣೆ ಮಾಡಲು ಸಕ್ಷಮವಾದ ವಿಶೇಷ ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಹಾಗೆ ಬಹಿರಂಗಪಡಿಸುವುದಕ್ಕೆ ಆ ವಿಶೇಷ ನ್ಯಾಯಾಲಯವು ಅನುಮತಿ ನೀಡಬಹುದು.

(3) ಮಾಧ್ಯಮದ ಅಥವಾ ಸ್ಟುಡಿಯೋದ ಅಥವಾ ಛಾಯಾಗ್ರಹಣ ಸೌಲಭ್ಯಗಳನ್ನು ಹೊಂದಿರುವ ಪ್ರಕಾಶಕನು ಅಥವಾ ಮಾಲೀಕನು ಆತನ ನೌಕರನ ಕೃತ್ಯಗಳಿಗೆ ಮತ್ತು ಲೋಪದೋಷಗಳಿಗೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರನಾಗತಕ್ಕದ್ದು.

(4) ಉಪ-ಪ್ರಕರಣ (1)ರ ಅಥವಾ ಉಪ-ಪ್ರಕರಣ (2)ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ, ಎರಡರಲ್ಲೊಂದು ಬಗೆಯ ಕಾರಾವಾಸದ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಒಳಗಾಗತಕ್ಕದ್ದು.

## ಅಧ್ಯಾಯ -VI

## ಮಗುವಿನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲು ಕಾರ್ಯವಿಧಾನ

24. **ಮಗುವಿನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವುದು.-** (1) ಮಗುವಿನ ಹೇಳಿಕೆಯನ್ನು ಮಗುವಿನ ನಿವಾಸದಲ್ಲಿ ಅಥವಾ ಅದು ಸಾಮಾನ್ಯವಾಗಿ ವಾಸವಿರುವ ಸ್ಥಳದಲ್ಲಿ ಅಥವಾ ಅದು ಇಚ್ಛಿಸುವ ಸ್ಥಳದಲ್ಲಿ ಹಾಗೂ ಕಾರ್ಯಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಸಬ್-ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆ ಅಲ್ಲದ ದರ್ಜೆಯ ಮಹಿಳಾ ಪೊಲೀಸ್ ಅಧಿಕಾರಿಯು ದಾಖಲು ಮಾಡಿಕೊಳ್ಳತಕ್ಕದ್ದು.

(2) ಮಗುವಿನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವಾಗ ಪೊಲೀಸ್ ಅಧಿಕಾರಿಯು ಸಮವಸ್ತ್ರದಲ್ಲಿರತಕ್ಕದ್ದಲ್ಲ.

(3) ತನಿಖೆಯನ್ನು ನಡೆಸುವ ಪೊಲೀಸ್ ಅಧಿಕಾರಿಯು ಮಗುವನ್ನು ವಿಚಾರಣೆ ಮಾಡುವಾಗ ಆ ಮಗುವು ಆ ಸಮಯದ ಯಾವುದೇ ಹಂತದಲ್ಲೂ ಆಪಾದಿತನೊಂದಿಗೆ ಯಾವುದೇ ರೀತಿಯಲ್ಲೂ ಸಂಪರ್ಕಕ್ಕೆ ಬಂದಿಲ್ಲ ಎನ್ನುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(4) ಮಗುವನ್ನು ಯಾವುದೇ ಕಾರಣಕ್ಕಾಗಿ ರಾತ್ರಿ ವೇಳೆಯಲ್ಲಿ ಪೊಲೀಸ್ ಠಾಣೆಯಲ್ಲಿ ಹಿಡಿದಿಟ್ಟುಕೊಂಡಿರತಕ್ಕದ್ದಲ್ಲ.

(5) ಮಗುವಿನ ಹಿತದೃಷ್ಟಿಯಿಂದ ವಿಶೇಷ ನ್ಯಾಯಾಲಯವು ಅನ್ಯಥಾ ನಿರ್ದೇಶನ ನೀಡಿದ ಹೊರತು, ಮಗುವಿನ ಗುರುತು ಸಾರ್ವಜನಿಕ ಮಾಧ್ಯಮಕ್ಕೆ ಲಭ್ಯವಾಗದಂತೆ ಸಂರಕ್ಷಿಸಿರುವುದನ್ನು ಪೊಲೀಸ್ ಅಧಿಕಾರಿಯು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**25. ಮಗುವಿನ ಹೇಳಿಕೆಯನ್ನು ಮ್ಯಾಜಿಸ್ಟ್ರೇಟರು ದಾಖಲು ಮಾಡಿಕೊಳ್ಳುವುದು.**– (1) ದಂಡ ಪ್ರಕ್ರಿಯಾ ಸಂಹಿತೆ, 1973ರ 2 (ಇದರಲ್ಲಿ ಇನ್ನು ಮುಂದೆ "ಸಂಹಿತೆ"ಯೆಂದು ಉಲ್ಲೇಖಿಸಲಾಗಿದೆ) 164ನೇ ಪ್ರಕರಣದ ಮೇರೆಗೆ ಮಗುವಿನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುತ್ತಿರುವಾಗ, ಅಂಥ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುತ್ತಿರುವ ಮ್ಯಾಜಿಸ್ಟ್ರೇಟರು ಆ 164ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಮಗುವು ಏನನ್ನು ಹೇಳುತ್ತದೋ ಅದನ್ನೇ ದಾಖಲು ಮಾಡಿಕೊಳ್ಳತಕ್ಕದ್ದು:

ಪರಂತು, ಸಂಹಿತೆಯ 164ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೊದಲನೇ ಪರಂತುಕದಲ್ಲಿ ಒಳಗೊಂಡಿರುವ ಉಪಬಂಧಗಳು ಆಪಾದಿತನ ಪರ ನ್ಯಾಯವಾದಿಯ ಹಾಜರಾತಿಗೆ ಆ (1)ನೇ ಉಪಪ್ರಕರಣವು ಅನುಮತಿ ಕೊಡುವುದಾದರೂ ಈ ವಿಷಯದಲ್ಲಿ ಅನ್ವಯವಾಗತಕ್ಕದ್ದಲ್ಲ.

(2) ಸಂಹಿತೆಯ 173ನೇ ಪ್ರಕರಣದ ಮೇರೆಗೆ ಪೊಲೀಸರು ಅಂತಿಮ ವರದಿಯನ್ನು ದಾಖಲು ಮಾಡುವಾಗ ಸಂಹಿತೆಯ 207ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿರುವ ದಾಖಲೆಯ ಪ್ರತಿಯನ್ನು ಮ್ಯಾಜಿಸ್ಟ್ರೇಟರು, ಮಗುವಿಗೆ ಮತ್ತು ಮಗುವಿನ ತಂದೆತಾಯಿಗೆ ಅಥವಾ ಅದರ ಪ್ರತಿನಿಧಿಗೆ ಒದಗಿಸತಕ್ಕದ್ದು.

**26. ದಾಖಲು ಮಾಡಿಕೊಳ್ಳಬೇಕಾದ ಹೇಳಿಕೆಗೆ ಸಂಬಂಧಿಸಿದ ಹೆಚ್ಚುವರಿ ಉಪಬಂಧಗಳು.**– (1) ಮ್ಯಾಜಿಸ್ಟ್ರೇಟರು ಅಥವಾ ಸಂದರ್ಭಾನುಸಾರ ಪೊಲೀಸ್ ಅಧಿಕಾರಿಯು, ಮಗುವಿನ ತಂದೆ ತಾಯಿಯ ಸಮಕ್ಷಮದಲ್ಲಿ ಅಥವಾ ಮಗುವು ಯಾವ ವ್ಯಕ್ತಿಯನ್ನು ನಂಬುತ್ತದೋ ಅಥವಾ ಯಾವ ವ್ಯಕ್ತಿಯ ಮೇಲೆ ವಿಶ್ವಾಸ ಇಟ್ಟಿದೆಯೋ ಆ ಯಾರೇ ಇತರ ವ್ಯಕ್ತಿಯ ಸಮಕ್ಷಮದಲ್ಲಿ ಮಗುವು ಏನನ್ನು ಹೇಳುತ್ತದೋ ಅದನ್ನೇ ದಾಖಲು ಮಾಡಿಕೊಳ್ಳತಕ್ಕದ್ದು.

(2) ಮ್ಯಾಜಿಸ್ಟ್ರೇಟರು ಅಥವಾ ಸಂದರ್ಭಾನುಸಾರ ಪೊಲೀಸ್ ಅಧಿಕಾರಿಯು ಮಗುವಿನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವಾಗ ನಿಯಮಿಸಬಹುದಾದಂಥ ಅರ್ಹತೆಗಳನ್ನು, ಅನುಭವವನ್ನು ಹೊಂದಿರುವಂಥ ಭಾಷಾಂತರಕಾರನ ಅಥವಾ ದುಭಾಷಿಯ ನೆರವನ್ನು ಪಡೆದುಕೊಳ್ಳುವುದು ಅವಶ್ಯಕವೆಂದು ಭಾವಿಸಿದಾಗಲೆಲ್ಲಾ ಅಂಥ ನೆರವನ್ನು ಅಂಥ ಫೀಜುಗಳ ಸಂದಾಯದ ಮೇಲೆ ಪಡೆದುಕೊಳ್ಳಬಹುದು.

(3) ಮಗುವು ಮಾನಸಿಕ ಅಥವಾ ದೈಹಿಕ ಅಸಮರ್ಥತೆಯುಳ್ಳ ಮಗುವು ಆಗಿದ್ದ ಪಕ್ಷದಲ್ಲಿ, ಮ್ಯಾಜಿಸ್ಟ್ರೇಟರು ಅಥವಾ ಸಂದರ್ಭಾನುಸಾರ ಪೊಲೀಸ್ ಅಧಿಕಾರಿಯು, ಮಗುವಿನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲು ವಿಶೇಷ ಶಿಕ್ಷಕನ ಅಥವಾ ಮಗುವಿನ ಸಂವಹನ ರೀತಿಯು ಚೆನ್ನಾಗಿ ಗೊತ್ತಿರುವ ಯಾರೇ ವ್ಯಕ್ತಿಯ ಅಥವಾ ಆ ಕ್ಷೇತ್ರದಲ್ಲಿ ನಿಯಮಿಸಬಹುದಾದಂಥ ವಿದ್ಯಾರ್ಹತೆಗಳನ್ನು, ಅನುಭವವನ್ನು ಹೊಂದಿರುವ ತಜ್ಞನ ನೆರವನ್ನು ನಿಯಮಿಸಬಹುದಾದಂಥ ಫೀಜುಗಳ ಸಂದಾಯದ ಮೇಲೆ ಪಡೆದುಕೊಳ್ಳಬಹುದು.

(4) ಎಲ್ಲಿ ಸಾಧ್ಯವೋ ಅಲ್ಲೆಲ್ಲಾ, ಮ್ಯಾಜಿಸ್ಟ್ರೇಟನು ಅಥವಾ ಸಂದರ್ಭಾನುಸಾರ ಪೊಲೀಸ್ ಅಧಿಕಾರಿಯು ಮಗುವಿನ ಹೇಳಿಕೆಯನ್ನು ದೃಶ್ಯ – ಶ್ರವಣ ವಿದ್ಯುನ್ಮಾನ ಸಾಧನಗಳ ಮೂಲಕವೂ ಸಹ ದಾಖಲು ಮಾಡಿಕೊಂಡಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**27. ಮಗುವಿನ ವೈದ್ಯಕೀಯ ಪರೀಕ್ಷೆ.**– (1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಯಾವ ಮಗುವಿನ ಮೇಲೆ ಎಸಗಲಾಗಿದೆಯೋ ಆ ಮಗುವಿನ ವೈದ್ಯಕೀಯ ಪರೀಕ್ಷೆಯನ್ನು, ಈ ಅಧಿನಿಯಮದ ಮೇರೆಗಿನ ನೋಂದಣಿಯಾಗದಿರುವ ಅಪರಾಧಗಳಿಗಾಗಿ ಪ್ರಥಮ ಮಾಹಿತಿ ವರದಿಯು ಅಥವಾ ಫಿರ್ಯಾದು ನೋಂದಾಣಿಯಾಗಿರದಿರುವ ಸಂಗತಿ ಏನೇ ಇದ್ದರೂ, ದಂಡ ಪ್ರಕ್ರಿಯಾ ಸಂಹಿತೆ, 1973ರ 164ಎ ಪ್ರಕರಣಕ್ಕೆ ಅನುಸಾರವಾಗಿ ನಡೆಸತಕ್ಕದ್ದು.

(2) ಹೆಣ್ಣು ಮಗುವು ದೌರ್ಜನ್ಯಕ್ಕೆ ಒಳಗಾಗಿದ್ದರೆ, ಮಹಿಳಾ ವೈದ್ಯರು ವೈದ್ಯಕೀಯ ಪರೀಕ್ಷೆಯನ್ನು ಮಾಡತಕ್ಕದ್ದು.

(3) ವೈದ್ಯಕೀಯ ಪರೀಕ್ಷೆಯನ್ನು ಮಗುವಿನ ತಂದೆ ತಾಯಿ ಸಮಕ್ಷಮದಲ್ಲಿ ಅಥವಾ ಮಗುವು ಯಾವ ವ್ಯಕ್ತಿಯ ಮೇಲೆ ವಿಶ್ವಾಸವನ್ನು ಅಥವಾ ನಂಬಿಕೆಯನ್ನು ಇಟ್ಟಿದೆಯೋ ಆ ಯಾರೇ ಇತರ ವ್ಯಕ್ತಿಯ ಸಮಕ್ಷಮದಲ್ಲಿ ನಡೆಸತಕ್ಕದ್ದು.

(4) ಮಗುವಿನ ವೈದ್ಯಕೀಯ ಪರೀಕ್ಷೆಯನ್ನು ನಡೆಸುವ ಸಮಯದಲ್ಲಿ ಮಗುವಿನ ತಂದೆ ತಾಯಿಯು ಅಥವಾ (3)ನೇ ಉಪ-ಪ್ರಕರಣದಲ್ಲಿ ಹೇಳಿರುವ ಇತರ ವ್ಯಕ್ತಿಯು ಯಾವುದೇ ಕಾರಣದಿಂದಾಗಿ ಅಲ್ಲಿ ಇರಲು ಆಗದಿದ್ದ ಸಂದರ್ಭದಲ್ಲಿ, ವೈದ್ಯಕೀಯ ಸಂಸ್ಥೆಯ ಮುಖ್ಯಸ್ಥನು ನಾಮ ನಿರ್ದೇಶನ ಮಾಡಿದ ಮಹಿಳೆಯ ಸಮಕ್ಷಮದಲ್ಲಿ ವೈದ್ಯಕೀಯ ಪರೀಕ್ಷೆಯನ್ನು ನಡೆಸತಕ್ಕದ್ದು.

## ಅಧ್ಯಾಯ –VII

### ವಿಶೇಷ ನ್ಯಾಯಾಲಯಗಳು

**28. ವಿಶೇಷ ನ್ಯಾಯಾಲಯಗಳೆಂದು ಹೆಸರಿಸುವುದು.–** (1) ತ್ವರಿತವಾಗಿ ಅಧಿವಿಚಾರಣೆಯನ್ನು ನಡೆಸುವ ಉದ್ದೇಶಗಳಿಗಾಗಿ, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯೊಂದಿಗೆ ಸಮಾಲೋಚಿಸಿ, ಅಧಿಕೃತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗಿನ ಅಪರಾಧಗಳ ಅಧಿವಿಚಾರಣೆ ನಡೆಸಲು ವಿಶೇಷ ನ್ಯಾಯಾಲಯವೆಂದು ಸೆಷನ್ಸ್ ನ್ಯಾಯಾಲಯವನ್ನು ಪ್ರತಿಯೊಂದು ಜಿಲ್ಲೆಗೆ ಹೆಸರಿಸತಕ್ಕದ್ದು:

ಪರಂತು, ಸೆಷನ್ಸ್ ನ್ಯಾಯಾಲಯವನ್ನು ಮಗುವಿನ ಹಕ್ಕುಗಳ ಸಂರಕ್ಷಣೆ ಆಯೋಗಗಳ ಅಧಿನಿಯಮ, 2005ರ (2006ರ 4) ಮೇರೆಗೆ ಮಕ್ಕಳ ನ್ಯಾಯಾಲಯವನ್ನು ಅಧಿಸೂಚಿಸಿದ್ದರೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಂಥದೇ ಉದ್ದೇಶಗಳಿಗಾಗಿ ಸೆಷನ್ಸ್ ನ್ಯಾಯಾಲಯವನ್ನು ಹೆಸರಿಸಿದ್ದರೆ ಆಗ, ಅಂಥ ನ್ಯಾಯಾಲಯವನ್ನು ಈ ಪ್ರಕರಣದ ಮೇರೆಗೆ ವಿಶೇಷ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಅಪರಾಧದ ಅಧಿವಿಚಾರಣೆಯನ್ನು ನಡೆಸುವಾಗ ವಿಶೇಷ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಮೇರೆಗೆ ಯಾವ ಅಪರಾಧದ [(1)ನೇ ಉಪ-ಪ್ರಕರಣದಲ್ಲಿ ಹೇಳಿರುವ ಅಪರಾಧ ಅಲ್ಲದ ಅಪರಾಧದ] ಆರೋಪವನ್ನು ಅದೇ ಅಧಿವಿಚಾರಣೆಯಲ್ಲಿ ಆಪಾದಿತನ ಮೇಲೆ ಹೊರಿಸಬಹುದಾಗಿದೆಯೋ ಆ ಅಪರಾಧದ ಅಧಿವಿಚಾರಣೆಯನ್ನು ಸಹ ನಡೆಸತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ರಚಿಸಿರುವ ವಿಶೇಷ ನ್ಯಾಯಾಲಯವು, ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 ರ 21ರಲ್ಲಿ ಏನೇ ಇದ್ದರೂ, ಲೈಂಗಿಕವಾಗಿ ಮಕ್ಕಳನ್ನು, ಯಾವುದೇ ಕೃತ್ಯದಲ್ಲಿ ಅಥವಾ ವರ್ತನೆಯಲ್ಲಿ ಅಥವಾ ರೀತಿಯಲ್ಲಿ ತೊಡಗಿಸಿಕೊಂಡಿರುವುದನ್ನು ಪ್ರತಿಬಿಂಬಿಸುವ ಅಥವಾ ಆನ್‌ಲೈನ್‌ನಲ್ಲಿ ಮಕ್ಕಳ ದುರ್ಬಳಕೆಗೆ ಅನುವು ಮಾಡಿಕೊಡುವ ಸುಸ್ಪಷ್ಟ ಲೈಂಗಿಕ ವಿಷಯ ಸಾಮಗ್ರಿಯ ಪ್ರಕಟಣೆಗೆ ಅಥವಾ ಪ್ರಸರಣಕ್ಕೆ ಆ ಅಧಿನಿಯಮದ 67ಬಿ ಪ್ರಕರಣವು ಎಷ್ಟರಮಟ್ಟಿಗೆ ಸಂಬಂಧಪಡುತ್ತದೋ ಅಷ್ಟರಮಟ್ಟಿಗೆ ಆ ಅಧಿನಿಯಮದ 67ಬಿ ಪ್ರಕರಣದ ಮೇರೆಗಿನ ಅಪರಾಧದ ಅಧಿವಿಚಾರಣೆಯನ್ನು ನಡೆಸುವ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

**29. ಕೆಲವು ಅಪರಾಧಗಳ ಬಗ್ಗೆ ಪೂರ್ವಭಾವನೆ.–** ಈ ಅಧಿನಿಯಮದ 3ನೇ, 5ನೇ, 7ನೇ ಮತ್ತು 9ನೇ ಪ್ರಕರಣಗಳ ಮೇರೆಗೆ ಯಾವುದೇ ಅಪರಾಧವನ್ನು ಮಾಡಿದ್ದಕ್ಕಾಗಿ ಅಥವಾ ಅಪರಾಧ ಮಾಡಲು ದುಷ್ಪ್ರೇರಣೆ ನೀಡಿದ್ದಕ್ಕಾಗಿ ಅಥವಾ ಅಪರಾಧ ಮಾಡಲು ಪ್ರಯತ್ನಿಸಿದ್ದಕ್ಕಾಗಿ ವ್ಯಕ್ತಿಯನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸಿದ್ದರೆ ವಿಶೇಷ ನ್ಯಾಯಾಲಯವು, ತದ್ವಿರುದ್ಧವಾದುದು, ರುಜುವಾತಾದ ಹೊರತು, ಅಂಥ ವ್ಯಕ್ತಿಯು ಸಂದರ್ಭಾನುಸಾರ ಅಪರಾಧವನ್ನು ಮಾಡಿದ್ದಾನೆಂದು ಅಥವಾ ಅಪರಾಧ ಮಾಡಲು ದುಷ್ಪ್ರೇರಣೆ ನೀಡಿದ್ದಾನೆಂದು ಅಥವಾ ಅಪರಾಧ ಮಾಡಲು ಪ್ರಯತ್ನಿಸಿದ್ದಾನೆಂದು ಪೂರ್ವಭಾವನೆ ಮಾಡತಕ್ಕದ್ದು.

**30. ಅಪರಾಧ ಮಾಡುವ ಮನಃಸ್ಥಿತಿಯ ಬಗ್ಗೆ ಪೂರ್ವಭಾವನೆ.–** (1) ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧದ ಬಗ್ಗೆ ನಡೆಯುವ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ ಆಪಾದಿತನಿಗೆ ಆಪರಾಧಿಕ ಮನಃಸ್ಥಿತಿ ಇತ್ತೆಂದು ಭಾವಿಸುವುದು ಆವಶ್ಯಕವಾಗುತ್ತದೋ ಆಗ ವಿಶೇಷ ನ್ಯಾಯಾಲಯವು ಅಂಥ ಮನಃಸ್ಥಿತಿ ಇತ್ತೆಂದು ಪೂರ್ವಭಾವನೆ ಮಾಡತಕ್ಕದ್ದು, ಆದರೆ ಆ ಪ್ರಾಸಿಕ್ಯೂಷನ್‌ನಲ್ಲಿ ಯಾವ ಕೃತ್ಯವನ್ನು ಅಪರಾಧವೆಂದು ಆರೋಪಿಸಲಾಗಿದೆಯೋ ಆ ಕೃತ್ಯವನ್ನು ಎಸಗುವಾಗ ತನಗೆ ಅಂಥ ಮನಃಸ್ಥಿತಿ ಇರಲಿಲ್ಲ ಎಂಬ ಸಂಗತಿಯನ್ನು ರುಜುವಾತುಪಡಿಸಲು ಆಪಾದಿತನಿಗೆ ಅದು ಒಂದು ಪ್ರತಿರಕ್ಷೆ ಆಗತಕ್ಕದ್ದು.

(2) ಅಂಥ ಮನಃಸ್ಥಿತಿ ಇತ್ತೆಂದು ಸಮಂಜಸವಾಗಿಯಾದರೂ ಅನುಮಾನಕ್ಕೆ ಆಸ್ಪದವೇ ಇಲ್ಲದಂತೆ ವಿಶೇಷ ನ್ಯಾಯಾಲಯವು ನಂಬಿದಾಗ ಮಾತ್ರವೇ ಅಂಥ ಮನಃಸ್ಥಿತಿ ಇತ್ತೆಂಬುದು ರುಜುವಾತಾಗಿದೆಯೆಂದು ಈ ಪ್ರಕರಣದ ಉದ್ದೇಶಗಳಿಗಾಗಿ, ಹೇಳಬೇಕೇ ಹೊರತು, ಅಂಥ ಮನಃಸ್ಥಿತಿಯು ಇತ್ತೆಂಬುದರ ಸಂಭವವೇ ಹೆಚ್ಚು ಎನ್ನುವುದು ಸ್ಥಿರಪಟ್ಟಿರುವುದರ ಆಧಾರದ ಮೇಲೆ ಅಲ್ಲ.

**ವಿವರಣೆ:** ಈ ಪ್ರಕರಣದಲ್ಲಿ, "ಆಪರಾಧಿಕ ಮನಃಸ್ಥಿತಿ" ಯು ಅಪರಾಧ ಮಾಡುವ ಉದ್ದೇಶ, ಅಪರಾಧ ಮಾಡುವುದಕ್ಕೆ ಪ್ರೇರಣೆ, ಅಪರಾಧ ಮಾಡುವ ಮನಃಸ್ಥಿತಿಯ ತಿಳಿವಳಿಕೆ ಇರುವುದು ಮತ್ತು ಅಪರಾಧ ಮಾಡುವ ಮನಃಸ್ಥಿತಿ ಇರುವುದನ್ನು ನಂಬುವುದು ಅಥವಾ ಆ ನಂಬಿಕೆಗೆ ಇರುವ ಕಾರಣ –ಇವುಗಳನ್ನು ಒಳಗೊಳ್ಳುತ್ತದೆ.

**31. ವಿಶೇಷ ನ್ಯಾಯಾಲಯದ ಮುಂದೆ ಇರುವ ವ್ಯವಹರಣೆಗಳಿಗೆ ದಂಡ ಪ್ರಕ್ರಿಯಾ ಸಂಹಿತೆ, 1973ರ ಅನ್ವಯ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು (ಜಾಮೀನಿಗೆ ಮತ್ತು ಬಾಂಡುಗಳಿಗೆ ಅನ್ವಯವಾಗುವ ಉಪಬಂಧಗಳು ಸೇರಿದಂತೆ) ವಿಶೇಷ ನ್ಯಾಯಾಲಯದ ಮುಂದೆ ಇರುವ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು, ಸದರಿ ಉಪಬಂಧಗಳ ಉದ್ದೇಶಗಳಿಗಾಗಿ ವಿಶೇಷ ನ್ಯಾಯಾಲಯವನ್ನು ಸೆಷನ್ಸ್ ನ್ಯಾಯಾಲಯವೆಂದು ಭಾವಿಸತಕ್ಕದ್ದು ಮತ್ತು ವಿಶೇಷ ನ್ಯಾಯಾಲಯದ ಮುಂದೆ ಇರುವ ಪ್ರಾಸಿಕ್ಯೂಷನನ್ನು ನಡೆಸುವ ವ್ಯಕ್ತಿಯನ್ನು ಪಬ್ಲಿಕ್ ಪ್ರಾಸಿಕ್ಯೂಟರೆಂದು ಭಾವಿಸತಕ್ಕದ್ದು.

**32. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳ ಮೇರೆಗಿನ ಮೊಕದ್ದಮೆಗಳನ್ನು ಮಾತ್ರ ನಡೆಸುವುದಕ್ಕಾಗಿ ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕೆ ಒಬ್ಬ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ರನ್ನು ರಾಜಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ ನೇಮಕ ಮಾಡತಕ್ಕದ್ದು.

(2) ವ್ಯಕ್ತಿಯು ನ್ಯಾಯವಾದಿಯಾಗಿ ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯಷ್ಟು ಕಾಲವೃತ್ತಿಯಲ್ಲಿ ನಿರತನಾಗಿದ್ದರೆ ಮಾತ್ರ (1)ನೇ ಉಪ-ಪ್ರಕರಣದ ಮೇರೆಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 2ನೇ ಪ್ರಕರಣದ (ಯು) ಖಂಡದ ಅರ್ಥವ್ಯಾಪ್ತಿಯೊಳಗೆ ಪಬ್ಲಿಕ್ ಪ್ರಾಸಿಕ್ಯೂಟರ್ ಎಂದು ಭಾವಿಸತಕ್ಕದ್ದು ಮತ್ತು ಆ ಸಂಹಿತೆಯ ಉಪಬಂಧವು ತದನುಸಾರವಾಗಿ ಪರಿಣಾಮ ಹೊಂದಿರತಕ್ಕದ್ದು.

## ಅಧ್ಯಾಯ –VIII

### ವಿಶೇಷ ನ್ಯಾಯಾಲಯಗಳ ಕಾರ್ಯವಿಧಾನ ಮತ್ತು ಅಧಿಕಾರಗಳು ಹಾಗೂ ಸಾಕ್ಷ್ಯವನ್ನು ದಾಖಲು ಮಾಡುವುದು

**33. ವಿಶೇಷ ನ್ಯಾಯಾಲಯದ ಕಾರ್ಯವಿಧಾನ ಮತ್ತು ಅಧಿಕಾರಗಳು.–** (1) ವಿಶೇಷ ನ್ಯಾಯಾಲಯವು, ಯಾವುದೇ ಅಪರಾಧ ಘಟಿಸುವುದಕ್ಕೆ ಕಾರಣವಾದ ಸಂಗತಿಗಳ ಬಗ್ಗೆ ದೂರನ್ನು ಸ್ವೀಕರಿಸಿದ ನಂತರ ಅಥವಾ ಅಂಥ ಸಂಗತಿಗಳ ಕುರಿತ ಪೊಲೀಸರ ವರದಿಯ ಮೇಲೆ, ಆಪಾದಿತನನ್ನು ಅಧಿವಿಚಾರಣೆಗಾಗಿ ತನಗೆ ಒಪ್ಪಿಸದೇ ಇದ್ದರೂ ಕೂಡ ಅಂಥ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

(2) ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರನು ಅಥವಾ ಸಂದರ್ಭಾನುಸಾರ ಆಪಾದಿತನ ಪರವಾಗಿ ಹಾಜರಾಗುತ್ತಿರುವ ವಕೀಲನು ಮಗುವಿನ ಮುಖ್ಯ ವಿಚಾರಣೆಯನ್ನು, ಪಾಟೀ ಸವಾಲನ್ನು ಅಥವಾ ಮರುವಿಚಾರಣೆಯನ್ನು ದಾಖಲು ಮಾಡುವಾಗ, ಮಗುವಿಗೆ ಕೇಳಬೇಕಾದ ಪ್ರಶ್ನೆಗಳನ್ನು ವಿಶೇಷ ನ್ಯಾಯಾಲಯಕ್ಕೆ ತಿಳಿಸತಕ್ಕದ್ದು. ಆನಂತರ ವಿಶೇಷ ನ್ಯಾಯಾಲಯವು ಮಗುವಿಗೆ ಆ ಪ್ರಶ್ನೆಗಳನ್ನು ಕೇಳತಕ್ಕದ್ದು.

(3) ವಿಶೇಷ ನ್ಯಾಯಾಲಯವು, ಅಧಿವಿಚಾರಣೆಯ ಅವಧಿಯಲ್ಲಿ ಮಗುವಿಗೆ ಆಗಾಗ್ಗೆ ಬಿಡುವು ಕೊಡುವುದಕ್ಕೆ ಅನುಮತಿ ನೀಡುವುದು ಅವಶ್ಯವೆಂದು ಪರಿಗಣಿಸಿದರೆ ಅದು ಅನುಮತಿ ಕೊಡಬಹುದು.

(4) ಮಗುವಿಗೆ ಯಾರಲ್ಲಿ ನಂಬಿಕೆ ಅಥವಾ ವಿಶ್ವಾಸ ಇದೆಯೋ ಅಂಥ ಕುಟುಂಬದ ವ್ಯಕ್ತಿಗೆ, ಪೋಷಕನಿಗೆ, ಸ್ನೇಹಿತನಿಗೆ ಅಥವಾ ಬಂಧುವಿಗೆ ನ್ಯಾಯಾಲಯದಲ್ಲಿ ಹಾಜರಿರುವುದಕ್ಕೆ ಅವಕಾಶ ನೀಡುವ ಮೂಲಕ ವಿಶೇಷ ನ್ಯಾಯಾಲಯವು ಮಗು – ಸ್ನೇಹಿ ವಾತಾವರಣವನ್ನು ಕಲ್ಪಿಸತಕ್ಕದ್ದು.

(5) ವಿಶೇಷ ನ್ಯಾಯಾಲಯವು, ನ್ಯಾಯಾಲಯದಲ್ಲಿ ಸಾಕ್ಷ್ಯ ನೀಡುವುದಕ್ಕಾಗಿ ಮಗುವನ್ನು ಪದೇ ಪದೇ ಕರೆಸಿಲ್ಲ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(6) ಮಗುವಿಗೆ ಗದರಿಸಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅಥವಾ ಅದರ ಚಾರಿತ್ರ್ಯ ವಧೆ ಮಾಡುವುದಕ್ಕೆ ವಿಶೇಷ ನ್ಯಾಯಾಲಯವು ಅನುಮತಿ ನೀಡತಕ್ಕದ್ದಲ್ಲ ಮತ್ತು ಅಧಿವಿಚಾರಣೆ ನಡೆಯುವ ಎಲ್ಲಾ ಕಾಲದಲ್ಲಿ ಮಗುವಿನ ಘನತೆಯನ್ನು ಕಾಪಾಡಿಕೊಂಡು ಬರಲಾಗಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(7) ವಿಶೇಷ ನ್ಯಾಯಾಲಯವು ತನಿಖೆಯು ಅಥವಾ ಅಧಿವಿಚಾರಣೆಯು ಆಗುತ್ತಿರುವಾಗ ಯಾವುದೇ ಸಮಯದಲ್ಲಿ ಮಗುವಿನ ಗುರುತನ್ನು ಬಹಿರಂಗಪಡಿಸಿಲ್ಲ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು:

ಪರಂತು, ಮಗುವಿನ ಹಿತದೃಷ್ಟಿಯಿಂದ ಅದರ ಗುರುತನ್ನು ಬಹಿರಂಗಪಡಿಸಬೇಕಾಗುತ್ತದೆ ಎಂದು ವಿಶೇಷ ನ್ಯಾಯಾಲಯವು ಅಭಿಪ್ರಾಯಪಟ್ಟರೆ ಅದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಹಾಗೆ ಬಹಿರಂಗಪಡಿಸುವುದಕ್ಕೆ ಅನುಮತಿ ನೀಡಬಹುದು.

**ವಿವರಣೆ:–** ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಮಗುವಿನ ಗುರುತು ಎಂಬುದರಲ್ಲಿ ಮಗುವಿನ ಕುಟುಂಬದ, ಶಾಲೆಯ, ಬಂಧುಗಳ, ನೆರೆಹೊರೆಯವರ ಗುರುತು ಅಥವಾ ಯಾವ ಮಾಹಿತಿಯಿಂದ ಮಗುವಿನ ಗುರುತನ್ನು ತಿಳಿಯಬಹುದೋ ಆ ಯಾವುದೇ ಇತರ ಮಾಹಿತಿಯು ಒಳಗೊಳ್ಳತಕ್ಕದ್ದು.

(8) ಸಮುಚಿತ ಪ್ರಕರಣಗಳಲ್ಲಿ, ವಿಶೇಷ ನ್ಯಾಯಾಲಯವು ಶಿಕ್ಷೆ ವಿಧಿಸುವುದರ ಜೊತೆಗೆ, ಮಗುವಿಗೆ ಯಾವುದೇ ದೈಹಿಕ ಅಥವಾ ಮಾನಸಿಕ ಆಘಾತವನ್ನುಂಟು ಮಾಡಿದ್ದಕ್ಕಾಗಿ ಆ ಮಗುವಿಗೆ ನಿಯಮಿಸಬಹುದಾದಂಥ ಪರಿಹಾರವನ್ನು ಸಂದಾಯ ಮಾಡುವಂತೆ ಅಥವಾ ಆ ಮಗುವಿಗೆ ಕೂಡಲೇ ಪುನರ್ವಸತಿ ಕಲ್ಪಿಸುವಂತೆ ನಿರ್ದೇಶನ ನೀಡಬಹುದು.

(9) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶೇಷ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಅಧಿವಿಚಾರಣೆಯ ಉದ್ದೇಶಕ್ಕಾಗಿ ಸೆಷನ್ಸ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಪರಾಧವನ್ನು ಅದು ಸೆಷನ್ಸ್ ನ್ಯಾಯಾಲಯವಾಗಿದ್ದರೆ ಹೇಗೆ ಅಧಿವಿಚಾರಣೆ ಮಾಡುತಿತ್ತೋ ಅದೇ ರೀತಿಯಲ್ಲಿ ಮತ್ತು ಸಾಧ್ಯವಾದಷ್ಟುಮಟ್ಟಿಗೆ ಸೆಷನ್ಸ್ ನ್ಯಾಯಾಲಯದ ಮುಂದೆ ನಡೆಯುವ ಅಧಿವಿಚಾರಣೆಗಾಗಿ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯವಿಧಾನಕ್ಕೆ ಅನುಸಾರವಾಗಿ ಅಧಿವಿಚಾರಣೆ ಮಾಡತಕ್ಕದ್ದು.

**34. ಮಗುವು ಅಪರಾಧವನ್ನು ಮಾಡಿದ ಪ್ರಕರಣದಲ್ಲಿ ಕಾರ್ಯವಿಧಾನ ಮತ್ತು ವಿಶೇಷ ನ್ಯಾಯಾಲಯದಿಂದ ವಯಸ್ಸಿನ ನಿರ್ಧಾರಣೆ.–** (1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಮಗುವು ಮಾಡಿದ್ದರೆ ಆ ಮಗುವಿನ ಬಗ್ಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 (2000ರ 56) ಉಪಬಂಧಗಳ ಮೇರೆಗೆ ವ್ಯವಹರಿಸತಕ್ಕದ್ದು.

(2) ವಿಶೇಷ ನ್ಯಾಯಾಲಯದ ಮುಂದೆ ನಡೆಯುವ ಯಾವುದೇ ವ್ಯವಹರಣೆಯಲ್ಲಿ ವ್ಯಕ್ತಿಯು ಮಗುವೇ ಅಥವಾ ಅಲ್ಲವೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ವಿಶೇಷ ನ್ಯಾಯಾಲಯವು ಆ ವ್ಯಕ್ತಿಯ ವಯಸ್ಸಿನ ಬಗ್ಗೆ ಸ್ವತಃ ಮನವರಿಕೆ

ಮಾಡಿಕೊಂಡ ನಂತರ, ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು ಮತ್ತು ಆ ತೀರ್ಮಾನಕ್ಕೆ ಬರಲು ಅದು ನೀಡಿರುವ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(3) ವಿಶೇಷ ನ್ಯಾಯಾಲಯವು ನೀಡಿದ ಯಾವುದೇ ಆದೇಶವನ್ನು, ಆ ನ್ಯಾಯಾಲಯವು (2)ನೇ ಉಪ-ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ವಯಸ್ಸನ್ನು ನಿರ್ಧರಿಸಿದೆಯೋ ಆ ವ್ಯಕ್ತಿಯ ವಯಸ್ಸು, ಆ ವ್ಯಕ್ತಿಯ ಸರಿಯಾದ ವಯಸ್ಸಲ್ಲವೆಂದು ತರುವಾಯ ಯಾವುದೇ ರುಜುವಾತನ್ನು ಒದಗಿಸಿದ ಮಾತ್ರಕ್ಕೆ ಅನೂರ್ಜಿತವಾದುದೆಂದು ಭಾವಿಸತಕ್ಕದ್ದಲ್ಲ.

**35. ಮಗುವಿನ ಸಾಕ್ಷ್ಯವನ್ನು ದಾಖಲು ಮಾಡುವುದಕ್ಕಾಗಿ ಕಾಲಾವಧಿ ಮತ್ತು ಮೊಕದ್ದಮೆಯ ವಿಲೆ.**– (1) ವಿಶೇಷ ನ್ಯಾಯಾಲಯವು, ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡ ಮೂವತ್ತು ದಿನಗಳೊಳಗೆ ಮಗುವಿನ ಸಾಕ್ಷ್ಯವನ್ನು ದಾಖಲಿಸಿಕೊಳ್ಳತಕ್ಕದ್ದು ಮತ್ತು ದಾಖಲು ಮಾಡಿಕೊಳ್ಳುವುದರಲ್ಲಿ ಏನಾದರೂ ವಿಳಂಬ ಆಗಿದ್ದರೆ ಅದಕ್ಕೆ ಕಾರಣಗಳನ್ನು ವಿಶೇಷ ನ್ಯಾಯಾಲಯವು ದಾಖಲಿಸತಕ್ಕದ್ದು.

(2) ವಿಶೇಷ ನ್ಯಾಯಾಲಯವು ಅಪರಾಧದ ಸಂಜ್ಞಾನವನ್ನು ತೆಗೆದುಕೊಂಡ ದಿನಾಂಕದಿಂದ ಸಾಧ್ಯವಾದಷ್ಟುಮಟ್ಟಿಗೆ ಒಂದು ವರ್ಷದ ಅವಧಿಯೊಳಗಾಗಿ ಅಧಿವಿಚಾರಣೆಯನ್ನು ಪೂರ್ಣಗೊಳಿಸತಕ್ಕದ್ದು.

**36. ಮಗು ಸಾಕ್ಷ್ಯವನ್ನು ನೀಡುವ ಕಾಲದಲ್ಲಿ ಆಪಾದಿತನನ್ನು ನೋಡಬಾರದು.**– (1) ವಿಶೇಷ ನ್ಯಾಯಾಲಯವು ಸಾಕ್ಷ್ಯವನ್ನು ದಾಖಲು ಮಾಡಿಕೊಳ್ಳುವ ಕಾಲದಲ್ಲಿ ಮಗು ಯಾವುದೇ ರೀತಿಯಲ್ಲಿ ಆಪಾದಿತನ ದೃಷ್ಟಿಗೆ ಬೀಳದಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು, ಅದೇ ಕಾಲದಲ್ಲಿ ಆಪಾದಿತನು ಮಗುವಿನ ಹೇಳಿಕೆಯನ್ನು ಮತ್ತು ತನ್ನ ನ್ಯಾಯವಾದಿಯೊಂದಿಗೆ ಆ ಮಗುವು ಸಂವಹನ ಮಾಡುತ್ತಿರುವುದನ್ನು ಕೇಳಿಸಿಕೊಳ್ಳುತ್ತಿದ್ದಾನೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಉಪ-ಪ್ರಕರಣ (1)ರ ಉದ್ದೇಶಗಳಿಗಾಗಿ, ವಿಶೇಷ ನ್ಯಾಯಾಲಯವು ಮಗುವಿನ ಹೇಳಿಕೆಯನ್ನು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಅಥವಾ ಅದು ಒಂದೇ ಕಾಣುವಂತಹ ಕನ್ನಡಿಗಳನ್ನು ಅಥವಾ ಪರದೆಗಳನ್ನು ಅಥವಾ ಯಾವುದೇ ಇತರ ಸಾಧನವನ್ನು ಬಳಸಿ ದಾಖಲು ಮಾಡಿಕೊಳ್ಳತಕ್ಕದ್ದು.

**37. ಅಧಿವಿಚಾರಣೆಗಳನ್ನು ನ್ಯಾಯಾಧೀಶರ ಕೊಠಡಿಯಲ್ಲಿ ನಡೆಸುವುದು.**– ವಿಶೇಷ ನ್ಯಾಯಾಲಯವು ಮೊಕದ್ದಮೆಗಳ ಅಧಿವಿಚಾರಣೆಯನ್ನು ನ್ಯಾಯಾಧೀಶರ ಕೊಠಡಿಯಲ್ಲಿ ಮಗುವಿನ ತಂದೆ ತಾಯಿಗಳ ಅಥವಾ ಮಗುವು ಯಾರಲ್ಲಿ ನಂಬಿಕೆ ಅಥವಾ ವಿಶ್ವಾಸವನ್ನು ಇಟ್ಟಿದೆಯೋ ಆ ಯಾರೇ ಇತರ ವ್ಯಕ್ತಿಯ ಸಮ್ಮುಖದಲ್ಲಿ ನಡೆಸತಕ್ಕದ್ದು:

ಪರಂತು, ಮಗುವಿನ ವಿಚಾರಣೆಯನ್ನು ನ್ಯಾಯಾಲಯವನ್ನು ಬಿಟ್ಟು ಇತರ ಸ್ಥಳದಲ್ಲಿ ನಡೆಸುವುದು ಅವಶ್ಯಕವೆಂದು ವಿಶೇಷ ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) 284ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಕಾರ್ಯಾಜ್ಞೆಯನ್ನು ಹೊರಡಿಸಲು ಮುಂದಾಗತಕ್ಕದ್ದು.

**38. ಮಗುವಿನ ಸಾಕ್ಷ್ಯವನ್ನು ದಾಖಲು ಮಾಡಿಕೊಳ್ಳುವಾಗ ದುಭಾಷಿಯ ಅಥವಾ ತಜ್ಞನ ನೆರವನ್ನು ಪಡೆಯುವುದು.**–(1) ನ್ಯಾಯಾಲಯವು ಮಗುವಿನ ಸಾಕ್ಷ್ಯವನ್ನು ದಾಖಲು ಮಾಡಿಕೊಳ್ಳುವಾಗ ಅವಶ್ಯವಿರುವಲ್ಲೆಲ್ಲಾ, ನಿಯಮಿಸಬಹುದಾದಂಥ ಅರ್ಹತೆಗಳನ್ನು, ಅನುಭವವನ್ನು ಹೊಂದಿರುವಂಥ ಭಾಷಾಂತರಕಾರನ ಅಥವಾ ದುಭಾಷಿಯ ನೆರವನ್ನು, ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿ ಪಡೆಯಬಹುದು.

(2) ಮಗುವು ಮಾನಸಿಕ ಅಥವಾ ದೈಹಿಕ ವಿಕಲತೆಯನ್ನು ಹೊಂದಿದ್ದರೆ, ವಿಶೇಷ ನ್ಯಾಯಾಲಯವು, ಮಗುವಿನ ಸಾಕ್ಷ್ಯವನ್ನು ದಾಖಲು ಮಾಡಿಕೊಳ್ಳಲು ನಿಯಮಿಸಬಹುದಾದಂಥ ಅರ್ಹತೆಗಳನ್ನು, ಅನುಭವವನ್ನು ಹೊಂದಿರುವಂಥ ವಿಶೇಷ ಶಿಕ್ಷಕನ ಅಥವಾ ಬಾಲಕನ ಸಂವಹನದ ರೀತಿಯನ್ನು ಚೆನ್ನಾಗಿ ಬಲ್ಲ ಯಾರೇ ವ್ಯಕ್ತಿಯ ಅಥವಾ ಆ ಕ್ಷೇತ್ರದಲ್ಲಿ ತಜ್ಞನಾಗಿರುವ ವ್ಯಕ್ತಿಯ ನೆರವನ್ನು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿ ಪಡೆಯಬಹುದು.

## ಅಧ್ಯಾಯ –IX

### ಸಂಕೀರ್ಣ

**39. ಮಗುವು, ತಜ್ಞರು, ಮುಂತಾದವರ ನೆರವನ್ನು ಪಡೆಯುವುದಕ್ಕಾಗಿ ಮಾರ್ಗದರ್ಶಿ ಸೂತ್ರಗಳು.**– ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು ಮಗುವಿಗೆ ನೆರವು ನೀಡುವುದಕ್ಕಾಗಿ ಅಧಿವಿಚಾರಣಾ ಪೂರ್ವ ಮತ್ತು ಅಧಿವಿಚಾರಣೆಯ ಹಂತದಲ್ಲಿ ಇರುವುದಕ್ಕಾಗಿ ಸರ್ಕಾರೇತರ ಸಂಘ ಸಂಸ್ಥೆಗಳನ್ನು, ವೃತ್ತಿಪರರನ್ನು ಮತ್ತು ತಜ್ಞರನ್ನು ಅಥವಾ ಮನಃಶಾಸ್ತ್ರ, ಸಮಾಜ ಕಾರ್ಯ, ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ ಮತ್ತು ಮಗುವಿನ ಬೆಳವಣಿಗೆ ವಿಷಯದಲ್ಲಿ ಜ್ಞಾನ ಹೊಂದಿರುವ ವ್ಯಕ್ತಿಗಳನ್ನು ಬಳಸಿಕೊಳ್ಳುವುದಕ್ಕಾಗಿ ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸತಕ್ಕದ್ದು.

**40. ಲೀಗಲ್ ಪ್ರಾಕ್ಟಿಷನರ್‌ರವರ ನೆರವನ್ನು ಪಡೆಯಲು ಮಗುವಿನ ಹಕ್ಕು.**– ದಂಡ ಪ್ರಕ್ರಿಯಾ ಸಂಹಿತೆ, 1973ರ 301ನೇ ಪ್ರಕರಣದ ಪರಂತುಕಕ್ಕೆ ಒಳಪಟ್ಟು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ತಾವು ಬಯಸುವ ಕಾನೂನು ಸಲಹೆಗಾರನ ನೆರವನ್ನು ಪಡೆಯಲು ಮಗುವಿನ ಕುಟುಂಬದವರು ಅಥವಾ ಪೋಷಕನು ಹಕ್ಕುಳ್ಳವರಾಗಿರತಕ್ಕದ್ದು:

ಪರಂತು, ಮಗುವಿನ ಕುಟುಂಬದವರಿಗೆ ಅಥವಾ ಪೋಷಕರಿಗೆ ಕಾನೂನು ಸಲಹೆಗಾರನನ್ನು ಗೊತ್ತುಮಾಡಿಕೊಳ್ಳಲು ಸಾಧ್ಯವಿರದಿದ್ದರೆ ಕಾನೂನು ಸೇವೆ ಪ್ರಾಧಿಕಾರವು ಅವರಿಗೆ ಒಬ್ಬ ವಕೀಲನನ್ನು ಒದಗಿಸತಕ್ಕದ್ದು.

**41. ಕೆಲವು ಸಂದರ್ಭಗಳಲ್ಲಿ 3 ರಿಂದ 13ರ ವರೆಗಿನ ಉಪಬಂಧಗಳು ಅನ್ವಯವಾಗದಿರುವುದು.**–ಮಗುವಿನ ತಂದೆ ತಾಯಿಗಳ ಅಥವಾ ಪೋಷಕರ ಸಮ್ಮತಿಯೊಂದಿಗೆ ಆ ಮಗುವಿನ ವೈದ್ಯಕೀಯ ಪರೀಕ್ಷೆಯನ್ನು ಮಾಡಿದ್ದರೆ ಅಥವಾ ಆ ಮಗುವಿಗೆ

ವೈದ್ಯಕೀಯ ಚಿಕಿತ್ಸೆಯನ್ನು ನೀಡಿದ್ದರೆ, ಆ ವೈದ್ಯಕೀಯ ಪರೀಕ್ಷೆಗೆ ಅಥವಾ ವೈದ್ಯಕೀಯ ಚಿಕಿತ್ಸೆಗೆ 3 ರಿಂದ 13ರ ವರೆಗಿನ (ಎರಡೂ ಸೇರಿದಂತೆ) ಪ್ರಕರಣಗಳ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**42. ಪರ್ಯಾಯ ದಂಡನೆ.–** ಯಾವುದೇ ಕೃತ್ಯವು ಅಥವಾ ಲೋಪವು ಈ ಅಧಿನಿಯಮದ ಮೇರೆಗೆ ಅಥವಾ ಭಾರತ ದಂಡ ಸಂಹಿತೆಯ 166ಎ, 354ಎ, 354ಬಿ, 354ಸಿ, 354ಡಿ, 370, 370ಎ, 375, 376, 376ಎ, 376ಸಿ, 376ಡಿ, 376ಇ ಪ್ರಕರಣಗಳ ಅಥವಾ 509ನೆಯ ಪ್ರಕರಣದ ಮೇರೆಗೆ ಸಹ ದಂಡನೀಯ ಅಪರಾಧವಾಗಿದ್ದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಅಪರಾಧದ ತಪ್ಪಿತಸ್ಥನೆಂದು ಕಂಡು ಬಂದ ಅಪರಾಧಿಯು, ಈ ಅಧಿನಿಯಮದ ಮೇರೆಗೆ ಅಥವಾ ಭಾರತ ದಂಡ ಸಂಹಿತೆಯ ಮೇರೆಗೆ ಅಂಥ ಅಪರಾಧಕ್ಕೆ ಅವುಗಳಲ್ಲಿ ಹೆಚ್ಚಿನ ಪ್ರಮಾಣದ ದಂಡನೆಯನ್ನು ಕಲ್ಪಿಸಿದ್ದರೆ, ಅದಕ್ಕೆ ಗುರಿಯಾಗತಕ್ಕದ್ದು.

**42ಎ. ಈ ಅಧಿನಿಯಮವು ಯಾವುದೇ ಇತರ ಕಾನೂನನ್ನು ಕುಂಠಿತಗೊಳಿಸುವಂತಿರಬಾರದು.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತಿರತಕ್ಕದ್ದಲ್ಲ. ಯಾವುದೇ ಅಸಂಗತತೆ ಕಂಡುಬಂದ ಸಂದರ್ಭದಲ್ಲಿ, ಈ ಅಧಿನಿಯಮದ ಉಪಬಂಧಗಳು, ಅಂಥ ಅಸಂಗತತೆಯಷ್ಟರ ಮಟ್ಟಿಗೆ, ಯಾವುದೇ ಅಂಥ ಕಾನೂನಿನ ಉಪಬಂಧಗಳಿಗಿಂತಲೂ ಅಧ್ಯಾರೋಹಿ ಪರಿಣಾಮವುಳ್ಳವುಗಳಾಗಿರತಕ್ಕದ್ದು.

**43. ಅಧಿನಿಯಮದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದು.–** ಕೇಂದ್ರ ಸರ್ಕಾರವು ಮತ್ತು ಪ್ರತಿಯೊಂದು ರಾಜ್ಯ ಸರ್ಕಾರವು,–

(ಎ) ಈ ಅಧಿನಿಯಮದ ಉಪಬಂಧಗಳ ಬಗ್ಗೆ ಜನ ಸಾಮಾನ್ಯರಿಗೆ, ಮಕ್ಕಳಿಗೆ ಹಾಗೂ ಅವರ ತಂದೆ ತಾಯಂದರಿಗೆ ಮತ್ತು ಪೋಷಕರಿಗೆ ಅರಿವು ಮೂಡಿಸುವ ಸಲುವಾಗಿ ಈ ಅಧಿನಿಯಮದ ಉಪಬಂಧಗಳಿಗೆ ದೂರದರ್ಶನ, ಆಕಾಶವಾಣಿ ಮತ್ತು ಮುದ್ರಣ ಮಾಧ್ಯಮವು ಸೇರಿದಂತೆ ಮಾಧ್ಯಮದ ಮೂಲಕ ನಿಯತ ಅಂತರಗಳಲ್ಲಿ ವ್ಯಾಪಕ ಪ್ರಚಾರ ನೀಡಿರುವುದನ್ನು;

(ಬಿ) ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಇತರ ವ್ಯಕ್ತಿಗಳಿಗೆ (ಪೊಲೀಸ್ ಅಧಿಕಾರಿಗಳನ್ನೊಳಗೊಂಡಂತೆ) ಈ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ನಿಯತಕಾಲಿಕ ತರಬೇತಿಯನ್ನು ನೀಡಿರುವುದನ್ನು

– ಸುನಿಶ್ಚಿತಪಡಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**44. ಅಧಿನಿಯಮದ ಅನುಷ್ಠಾನದ ಮೇಲ್ವಿಚಾರಣೆ.–** (1) ಮಗುವಿನ ಹಕ್ಕುಗಳ ಸಂರಕ್ಷಣಾ ಆಯೋಗಗಳ ಅಧಿನಿಯಮ, 2005 (2006ರ 4)ರ 3ನೇ ಪ್ರಕರಣದ ಮೇರೆಗೆ ರಚಿಸಲಾದ ರಾಷ್ಟ್ರೀಯ ಮಗುವಿನ ಹಕ್ಕುಗಳ ಸಂರಕ್ಷಣಾ ಆಯೋಗವು ಅಥವಾ ಸಂದರ್ಭಾನುಸಾರ 17ನೇ ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಮಗುವಿನ ಹಕ್ಕುಗಳ ಸಂರಕ್ಷಣಾ ಆಯೋಗವು, ಆ ಅಧಿನಿಯಮದ ಮೇರೆಗೆ ತನಗೆ ವಹಿಸಿರುವ ಪ್ರಕಾರ್ಯಗಳ ಜೊತೆಗೆ, ಈ ಅಧಿನಿಯಮದ ಉಪಬಂಧಗಳ ಅನುಷ್ಠಾನವನ್ನು ಸಹ ನಿಯಮಿಸಬಹುದಾದಂಥ ರೀತಿಯಲ್ಲಿ ಮೇಲ್ವಿಚಾರಣೆ ಮಾಡತಕ್ಕದ್ದು.

(2) ಉಪ–ಪ್ರಕರಣ (1)ರಲ್ಲಿ ತಿಳಿಸಿದ ರಾಷ್ಟ್ರೀಯ ಆಯೋಗವು ಅಥವಾ ಸಂದರ್ಭಾನುಸಾರ ರಾಜ್ಯ ಆಯೋಗವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ಮಾಡುವಾಗ, ಮಗುವಿನ ಹಕ್ಕುಗಳ ಸಂರಕ್ಷಣಾ ಆಯೋಗಗಳ ಅಧಿನಿಯಮ, 2005 (2006ರ 4)ರ ಮೇರೆಗೆ ತನ್ನಲ್ಲಿ ನಿಹಿತಗೊಳಿಸಿರುವಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಉಪ–ಪ್ರಕರಣ (1)ರಲ್ಲಿ ತಿಳಿಸಿದ ರಾಷ್ಟ್ರೀಯ ಆಯೋಗವು ಅಥವಾ ಸಂದರ್ಭಾನುಸಾರ ರಾಜ್ಯ ಆಯೋಗವು, ಮಗುವಿನ ಹಕ್ಕುಗಳ ಸಂರಕ್ಷಣಾ ಆಯೋಗಗಳ ಅಧಿನಿಯಮ, 2005 (2006ರ 4)ರ 16ನೇ ಪ್ರಕರಣದಲ್ಲಿ ತಿಳಿಸಿರುವ ವಾರ್ಷಿಕ ವರದಿಯಲ್ಲಿ ಈ ಪ್ರಕರಣದ ಮೇರೆಗಿನ ತನ್ನ ಕಾರ್ಯ ಚಟುವಟಿಕೆಗಳನ್ನು ಸಹ ಸೇರಿಸತಕ್ಕದ್ದು.

**45. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಆ ನಿಯಮಗಳು, ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ,–

(ಎ) 19ನೇ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ, 26ನೇ ಪ್ರಕರಣದ (2)ನೇ ಮತ್ತು (3)ನೇ ಉಪ–ಪ್ರಕರಣಗಳ ಮೇರೆಗೆ ಮತ್ತು 38ನೇ ಪ್ರಕರಣದ ಮೇರೆಗೆ ಭಾಷಾಂತರಕಾರನಿಗೆ ಅಥವಾ ದುಭಾಷಿಗೆ, ವಿಶೇಷ ಶಿಕ್ಷಕನಿಗೆ ಅಥವಾ ಮಗುವಿನ ಸಂವಹನ ರೀತಿಯನ್ನು ಚೆನ್ನಾಗಿ ಬಲ್ಲ ಯಾರೇ ವ್ಯಕ್ತಿಗೆ ಅಥವಾ ಆ ಕ್ಷೇತ್ರದಲ್ಲಿನ ತಜ್ಞನಿಗೆ ಇರಬೇಕಾದ ಅರ್ಹತೆಗಳು ಮತ್ತು ಅನುಭವ ಮತ್ತು ಅವರಿಗೆ ಸಂದಾಯ ಮಾಡಬೇಕಾದ ಫೀಜು;

(ಬಿ) 19ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಮಗುವಿನ ಪಾಲನೆ ಪೋಷಣೆ ಮತ್ತು ರಕ್ಷಣೆ ಮತ್ತು ತುರ್ತು ವೈದ್ಯಕೀಯ ಚಿಕಿತ್ಸೆ;

(ಸಿ) 33ನೇ ಪ್ರಕರಣದ (8)ನೇ ಉಪ–ಪ್ರಕರಣದ ಮೇರೆಗೆ ಪರಿಹಾರದ ಸಂದಾಯ;

(ಡಿ) 44ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಧಿನಿಯಮದ ಉಪಬಂಧಗಳ ನಿಯತಕಾಲಿಕ ಮೇಲ್ವಿಚಾರಣೆಯ ರೀತಿ;

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡುಮಾಡಬೇಕೆಂದು ಎರಡುಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಬಾರದೆಂದು ಎರಡು ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಡಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**46. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸಿ, ತೊಂದರೆಯನ್ನು ನಿವಾರಿಸಲು ಅವಶ್ಯಕ ಅಥವಾ ವಿಹಿತವೆಂದು ತನಗೆ ತೋರಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**ಅನುಸೂಚಿ**

[2(ಸಿ) ಪ್ರಕರಣವನ್ನು ನೋಡಿ]

**ಈ ಕೆಳಕಂಡ ಅಧಿನಿಯಮಗಳ ಮೇರೆಗೆ ರಚಿಸಿದ ಸಶಸ್ತ್ರ ಪಡೆಗಳು ಮತ್ತು ಭದ್ರತಾ ಪಡೆಗಳು**

(ಎ) ವಾಯುದಳ ಅಧಿನಿಯಮ, 1950 (1950ರ 45);

(ಬಿ) ಸೇನಾ ಅಧಿನಿಯಮ, 1950 (1950ರ 46);

(ಸಿ) ಅಸ್ಸಾಂ ರೈಫಲ್ಸ್ ಅಧಿನಿಯಮ, 2006(2006ರ 47);

(ಡಿ) ಬಾಂಬೆ ಹೋಮ್‌ಗಾರ್ಡ್ಸ್ ಅಧಿನಿಯಮ, 1947 (1947ರ 3);

(ಇ) ಗಡಿ ಭದ್ರತಾ ಪಡೆ ಅಧಿನಿಯಮ, 1968 (1968ರ 47);

(ಎಫ್) ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಅಧಿನಿಯಮ, 1968 (1968ರ 50);

(ಜಿ) ಕೇಂದ್ರ ಮೀಸಲು ಪೊಲೀಸ್‌ದಳ ಅಧಿನಿಯಮ, 1949 (1949ರ 66);

(ಎಚ್) ಕರಾವಳಿ ರಕ್ಷಣಾ ಪಡೆ ಅಧಿನಿಯಮ, 1978 (1978ರ 30);

(ಐ) ದೆಹಲಿ ವಿಶೇಷ ಪೊಲೀಸ್ ಸ್ಥಾಪನೆ ಅಧಿನಿಯಮ, 1946 (1946ರ 25);

(ಜೆ) ಇಂಡೋ–ಟಿಬೇಟಿಯನ್ ಗಡಿ ಪೊಲೀಸ್‌ದಳ ಅಧಿನಿಯಮ, 1992 (1992ರ 35);

(ಕೆ) ನೌಕಾ ದಳ ಅಧಿನಿಯಮ, 1957 (1957ರ 62)

(ಎಲ್) ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008 (2008ರ 34);

(ಎಂ) ರಾಷ್ಟ್ರೀಯ ಭದ್ರತಾ ಕಾವಲು ಪಡೆ ಅಧಿನಿಯಮ, 1986 (1986ರ 47);

(ಎನ್) ರೈಲ್ವೆ ಸಂರಕ್ಷಣಾ ದಳ ಅಧಿನಿಯಮ, 1957 (1957ರ 23);

(ಒ) ಸಶಸ್ತ್ರ ಸೀಮಾಬಲ ಅಧಿನಿಯಮ, 2007 (2007ರ 53);

(ಪಿ) ವಿಶೇಷ ಸಂರಕ್ಷಣಾ ತಂಡ ಅಧಿನಿಯಮ, 1988 (1988ರ 34);

(ಕ್ಯೂ) ಪ್ರಾದೇಶಿಕ ಸೇನಾ ಅಧಿನಿಯಮ, 1948(1948ರ 56);

(ಆರ್) ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರಗಳು) ಅಧಿನಿಯಮ, 1958, (1958ರ28)ರ 2ನೇ ಪ್ರಕರಣದ (ಎ) ಖಂಡದಲ್ಲಿ ಪರಿಭಾಷಿಸಿರುವಂಥ ಸಶಸ್ತ್ರ ಪಡೆಗಳೂ ಸೇರಿದಂತೆ, ರಾಜ್ಯದ ನಾಗರಿಕ ಅಧಿಕಾರಸ್ಥರಿಗೆ ನೆರವು ನೀಡಲು ರಾಜ್ಯದ ಕಾನೂನುಗಳ ಮೇರೆಗೆ ರಚಿತವಾದ ಮತ್ತು ಆಂತರಿಕ ಗಲಭೆಗಳ ಸಂದರ್ಭದಲ್ಲಿ ಅಥವಾ ಅನ್ಯಥಾ ಪಡೆಯನ್ನು ನಿಯೋಜಿಸಲು ಅಧಿಕಾರ ಹೊಂದಿರುವ ರಾಜ್ಯ ಪೊಲೀಸ್ ಪಡೆಗಳು (ಸಶಸ್ತ್ರ ಪೊಲೀಸ್ ಪಡೆಗಳೂ ಸೇರಿದಂತೆ.)

* * * * *